ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

ನವನಗರ, ಹುಬ್ಬಳ್ಳಿ

ಲೆಕ್ಕ ಪರಿಶೋಧನಾ ವರದಿ
ಸನ್ 2021-22

HUBBALLI-DHARWAD URBAN DEVELOPMENT AUTHORITY

Navanagar, HUBBALLI

AUDIT REPORT 2021-22

JOINT DIRECTOR
LOCAL AUDIT CIRCLE
HETTAR COLONY, P.B. ROAD DHARWAD-580004
Phone No: 0836-2956540
Email Id: jdlac.dwd@gmail.com.

ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ
ಮತ್ತು ಲೆಕ್ಕಪತ್ರ ಇಲಾಖೆ

ಜಂಟಿ ನಿರ್ದೇಶಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಳ,
ಹೆಟ್ಟರ್ ಕಾಲನಿ, ಪಿ.ಬಿ ಮುಖ್ಯರಸ್ತೆ
ಧಾರವಾಡ-580004
ದೂರವಾಣಿ: 0836-2956540
Email Id: jdlac.dwd@gmail.com.

ಸಂಖ್ಯೆ:ಜಂ.ನಿ/ಸ್ಥ.ಲೆ.ಪ.ವ.ಧಾ/ಹುಧಾನಪ್ರಾ 21-22/2022-23/ ದಿ.26.08.2022.

ಇವರಿಗೆ,

ಆಯುಕ್ತರು
ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ
ನವನಗರ, ಹುಬ್ಬಳ್ಳಿ.

ಮಾನ್ಯರೇ,

ವಿಷಯ: ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2021-22ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಕಳಿಸುವ ಕುರಿತು.

ಉಲ್ಲೇಖ: (1) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1987 ನಿಯಮ 48
(2) ಅಪರ ನಿರ್ದೇಶಕರು, ಪ್ರಾಂತೀಯ ಕಚೇರಿ, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಬೆಳಗಾವಿ ಇವರ ಪತ್ರ ಸಂ. ಪ್ರಾಂಕಬೆ/ಸ್ಥ.ಲೆ.ಪ.ವ.ಧಾ/ಲೆಪವ/2022-23/411, ದಿ.20.08.2022.

.....

ಮೇಲ್ಕಂಡ ವಿಷಯ ಮತ್ತು ಉಲ್ಲೇಖಿತ ಪತ್ರಗಳನ್ವಯ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2021-22 ನೇ ಸಾಲಿನ ಲೆಕ್ಕಪರಿಶೋಧನಾ ವರದಿಯನ್ನು ಈ ಪತ್ರಕ್ಕೆ ಲಗತ್ತಿಸಿ ಸೂಕ್ತ ಕ್ರಮಕ್ಕಾಗಿ ಕಳಿಸಿದೆ. ವರದಿಯಲ್ಲಿನ ಆಕ್ಷೇಪಣಾ ಕಂಡಿಕೆಗಳಿಗೆ ನಿಯಮಾನುಸಾರ ಅನುಸರಣೆಗಳನ್ನು ಕಳುಹಿಸಲು ಕೋರಿದೆ.

ತಮ್ಮ ವಿಶ್ವಾಸಿ

ಅಡಕ: ಮೇಲಿನಂತೆ

ಸಹಿ/-
ಜಂಟಿ ನಿರ್ದೇಶಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಳ
ಧಾರವಾಡ

ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2021–22ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಆಕ್ಷೇಪಣೆ ಹಾಗೂ ವಸೂಲಾತಿಗೆ ಸೂಚಿಸಿದ ಮೊತ್ತದ ವಿವರಣಾ ತಖ್ತೆ

ಕ್ರ. ಸಂ.	ಕಂಡಿಕೆ ಸಂಖ್ಯೆ	ವಿವರಗಳು	ಆಕ್ಷೇಪಣೆ ಮೊತ್ತ	ವಸೂಲಾತಿ ಮೊತ್ತ
1	20	ಅಸ್ತಿಕರ ಮೇಲೆ ವಸೂಲಿಸಿದ ಉಪಕರಗಳ ಕುರಿತು	91946	00
2	21	ಅಸ್ತಿಕರ DCB ಕುರಿತು	00	195298
3	22	ಕಾಮಗಾರಿ ಬಿಲ್ಲುಗಳಲ್ಲಿ ಶಾಸನಬದ್ಧ ಕಟಾವಣೆಗಳನ್ನು ಸರ್ಕಾರದ ನಿಧಿಗ ಭರಿಸಿದ ಕುರಿತು	685405	00
4	25(1)	2021-22 ನೇ ಸಾಲಿನ ವಿವಿಧ ವಿನ್ಯಾಸಗಳ ಮೂಲ ಹಾಗೂ ಬಿಡಿ ನಿವೇಶನಗಳ ಕುರಿತು	00	56521500
5	27	2021-22 ನೇ ಸಾಲಿನಲ್ಲಿ ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ	00	5447127
6	34	ದೊಡ್ಡನಾಯಕನಕೊಪ್ಪ ಗ್ರಾಮದ ರಿ.ಸ.ನಂ. 8ಆ+8ಕ+9/3 ವಸತಿ ವಿನ್ಯಾಸದಲ್ಲಿಯ ವಾಣಿಜ್ಯ ನಿವೇಶನ ಸಂಖ್ಯೆ: 32 ರಲ್ಲಿ ನಿರ್ಮಾಣ ಮಾಡಿದ ವಾಣಿಜ್ಯ ಸಂಕೀರಣ ಹಾಗೂ ವಸತಿ ಕಟ್ಟಡವನ್ನು ನಿರ್ಮಾಣ ಮಾಡಿದ ಕುರಿತು	4361326	00
7	35	ಧಾರವಾಡ ತಾ॥ ಲಕ್ಕಮನಹಳ್ಳಿ ರಿ.ಸ. ನಂ.165 & 166 ವಸತಿ ಬಡಾವಣೆಯಲ್ಲಿಯ ಬೀದಿ ದೀಪಗಳ ವಾರ್ಷಿಕ ನಿರ್ವಹಣೆ ಕಾಮಗಾರಿ ಕುರಿತು	87070	00
8	36	ಧಾರವಾಡ ಶಹರದ ದೊಡ್ಡನಾಯಕನಕೊಪ್ಪ ವಸತಿ ವಿನ್ಯಾಸದಲ್ಲಿ ನಿರ್ಮಿಸಿದ ವಾಣಿಜ್ಯ ಹಾಗೂ ವಸತಿ ಹಾಗೂ ವಸತಿ ಸಂಕೀರ್ಣಕ್ಕೆ ಪ್ಯಾನಲ್ ಬೋರ್ಡ ಅಳವಡಿಸಿ ಹೊರಭಾಗ ವಿದ್ಯುತೀಕರಣ ಕಾಮಗಾರಿ ಕುರಿತು	482145	00
9	37	ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಯಲ್ಲಿ ವಿದ್ಯುತ್ತೀಕರಣ ಕಾಮಗಾರಿ ಕುರಿತು	128405	00
10	39	ಧಾರವಾಡ ಸಪ್ತಾಪುರ ವಾಣಿಜ್ಯ ಮಳಿಗೆಗಳ ಕುರಿತು	00	453138
11	45	2021-22 ನೇ ಸಾಲಿನಲ್ಲಿ ಪ್ರಾಧಿಕಾರದ ಖಾಯಂ ಅಧಿಕಾರಿಗಳು/ ಸಿಬ್ಬಂದಿಗಳಿಗೆ ವೇತನ ಪಾವತಿ ಮತ್ತು ಹೊರಗುತ್ತಿಗೆ ಸಿಬ್ಬಂದಿಗಳ ಸೇವೆ ಪಡೆದ ಕುರಿತು	6913150	00
12	46	ನಿಯೋಜನೆ ಅಧಿಕಾರಿ/ಸಿಬ್ಬಂದಿಗಳ ರಜಾ ವಂತಿಕೆ ಕುರಿತು	1268020	00
		ಒಟ್ಟು 08 ಆಕ್ಷೇಪಣೆ ಮತ್ತು 04 ವಸೂಲಾತಿ ಕಂಡಿಕೆಗಳು	14017467	62618063

ಸಹಿ/–
ಜಂಟಿ ನಿರ್ದೇಶಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಳ
ಧಾರವಾಡ

ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2021–22ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

1) ಪೀಠಿಕೆ :

ಕರ್ನಾಟಕ ರಾಜ್ಯದ ಎರಡನೆಯ ದೊಡ್ಡ ನಗರವಾದ ಹುಬ್ಬಳ್ಳಿ–ಧಾರವಾಡ ಅವಳಿ ನಗರವು ಕೈಗಾರಿಕಾ ವಾಣಿಜ್ಯ, ವಿದ್ಯಾ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಮುಂದುವರೆದಿದೆ. ಹುಬ್ಬಳ್ಳಿ–ಧಾರವಾಡ ಅವಳಿ ನಗರದ ಯೋಜನಾಬದ್ಧ ಬೆಳವಣಿಗೆಗಾಗಿ 1966 ರಲ್ಲಿ ಯೋಜನಾ ಪ್ರಾಧಿಕಾರದ ಸ್ಥಾಪನೆಯಾಯಿತು. ಮುಂದೆ 1976 ರಲ್ಲಿ ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲಾಯಿತು. ನಗರ ಯೋಜನಾ ಪ್ರಾಧಿಕಾರ ಮತ್ತು ನಗರಾಭಿವೃದ್ಧಿ ಮಂಡಳಿಗಳನ್ನು ಒಂದು ಪ್ರಾಧಿಕಾರದ ಅಡಿಯಲ್ಲಿ ತರುವ ಉದ್ದೇಶದಿಂದ 1988ರಲ್ಲಿ ನಗರಾಭಿವೃದ್ಧಿ ಪ್ರಾಧಿಕಾರವಾಗಿ ರೂಪಗೊಂಡಿತು. ಹುಬ್ಬಳ್ಳಿ–ಧಾರವಾಡ ನಗರಗಳಿಗೆ ಹೊಂದಿಕೊಂಡ 63 ಗ್ರಾಮಗಳು ಈ ಯೋಜನೆಯಡಿ ವಿಲೀನಗೊಂಡಿವೆ.

ಮಹಾನಗರದ ಮುಂದಿನ ಬೆಳವಣಿಗೆಯನ್ನು ನಿರೀಕ್ಷಿಸಿ, ಕರ್ನಾಟಕ ನಗರ ಯೋಜನಾ ಕಾನೂನಿನ ಅಡಿಯಲ್ಲಿ ಸಮಗ್ರ ವ್ಯಾಪಕಾಭಿವೃದ್ಧಿ ಯೋಜನಾ ನಕ್ಷೆ, ನಕಾಶೆ ತಯಾರಿಸುವುದರೊಂದಿಗೆ, ಯೋಜನಾಬದ್ಧ ಬೆಳವಣಿಗೆ ನಿಗದಿಗೊಳಿಸಲಾಗಿದೆ. 19–07–1988 ರಂದು ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ವ್ಯಾಪಕಾಭಿವೃದ್ಧಿ ಯೋಜನೆಗೆ ಸರ್ಕಾರದ ಅಂತಿಮ ಅನುಮೋದನ ದೊರಕಿದೆ. ಇದರ ಪ್ರಕಾರ ಸ್ಥಳೀಯ ಯೋಜನಾ ಪ್ರದೇಶದ ಕ್ಷೇತ್ರ 413 ಚ.ಕಿ.ಮೀ.ಇದೆ. ಈಗ ಪರಿಷ್ಕೃತ ವ್ಯಾಪಕಾಭಿವೃದ್ಧಿ ಯೋಜನೆಗೆ ಸರ್ಕಾರದ ಆದೇಶ ಸಂಖ್ಯೆ:ನ.ಅ.ಇ./201/ಬೆಮಪ್ರಾ/01 ದಿ: 12–11–2003 ರನ್ವಯ ಅಂತಿಮ ಅನುಮೋದನೆಯನ್ನು ನೀಡಲಾಗಿದೆ. ಸದರಿ ಯೋಜನೆಯನ್ನು 2021 ನೇ ಇಸ್ವಿಗೆ ಅಂದಾಜಿಸಲಾದ 12.50 ಲಕ್ಷ ಜನಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತಾವನೆಗಳನ್ನು ಅಳವಡಿಸಲಾಗಿರುತ್ತದೆ ಹಾಗೂ ಇದಕ್ಕೆ ಒಟ್ಟಾರೆ ಅಭಿವೃದ್ಧಿಗಾಗಿ 13,747 ಹೆಕ್ಟೇರ್ ಪ್ರದೇಶವನ್ನು ನಿಗದಿಗೊಳಿಸಲಾಗಿದೆ. ಈ ಪೈಕಿ ವಸತಿಗಾಗಿ 5883.72 ಹೆಕ್ಟೇರ್ ಪ್ರದೇಶವನ್ನು ಕಾಯ್ದಿರಿಸಲಾಗಿದೆ. ಸನ್ 2003 ರಲ್ಲಿ ಅನುಮೋದನೆಗೊಂಡ ಪರಿಷ್ಕೃತ ವ್ಯಾಪಾಕಾಭಿವೃದ್ಧಿ ಯೋಜನೆಯನ್ನು ಪುನಃ 2011 ರಲ್ಲಿ ಪರಿಷ್ಕರಿಸಲು ಕೈಗೆತ್ತಿಕೊಂಡಿರುತ್ತದೆ. ಸದರಿ ಯೋಜನೆಯನ್ನು ತಾತ್ಕಾಲಿಕ ಅಂಗೀಕಾರಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ನಿರೀಕ್ಷೆಯಲ್ಲಿರುತ್ತದೆ. 2021–22ನೇ ಸಾಲಿನಲ್ಲಿ ಪ್ರಾಧಿಕಾರದಿಂದ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಕ್ರಿಯೆ ಜರುಗಿರುವುದಿಲ್ಲ.

ಪ್ರಾಧಿಕಾರದ ರಚನೆ :

ಪ್ರಾಧಿಕಾರವು ಈ ಕೆಳಕಂಡ ವಿಭಾಗಗಳನ್ನು ಹೊಂದಿರುತ್ತದೆ.

ಅ) ಇಂಜಿನೀಯರಿಂಗ್ ವಿಭಾಗ

ಆ) ನಗರ ಯೋಜನಾ ವಿಭಾಗ

ಇ) ಭೂಸ್ವಾಧೀನ ವಿಭಾಗ

ಈ) ಆರ್ಥಿಕ ವಿಭಾಗ

ಉ) ಸಾಮಾನ್ಯ ಆಡಳಿತ ವಿಭಾಗ

ಅ) ಇಂಜಿನೀಯರಿಂಗ್ ವಿಭಾಗ: ಬಡಾವಣೆಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ವಿವಿಧ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಗೊಳಿಸುವುದು ಇಂಜನೀಯರಿಂಗ್ ವಿಭಾಗದ ಪ್ರಾಥಮಿಕ ಕಾರ್ಯವಾಗಿರುತ್ತದೆ. ಪ್ರಾಧಿಕಾರದ ಬಡಾವಣೆಗಳಲ್ಲಿ ಸಿವಿಲ್ ಕಾಮಗಾರಿ ಅಭಿವೃದ್ಧಿ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆ ಹಾಗೂ ವಿದ್ಯುತ್ ಸೌಕರ್ಯ ಕಾಮಗಾರಿಗಳನ್ನು ಕಾರ್ಯಗತಗೊಳಿಸುವುದು ಮತ್ತು ಖಾಸಗಿ ಬಡಾವಣೆಗಳಲ್ಲಿ ಅಭಿವೃದ್ಧಿ ಕಾರ್ಯಗಳ ಮೇಲ್ವಿಚಾರಣೆ, ಈ ವಿಭಾಗದ ಕಾರ್ಯವ್ಯಾಪ್ತಿಯಲ್ಲಿ ಬರುತ್ತದೆ.

ಆ) ನಗರ ಯೋಜನಾ ವಿಭಾಗ: ಅವಳಿ ನಗರಗಳಿಗೆ ವ್ಯಾಪಕ ಅಭಿವೃದ್ಧಿ ಯೋಜನಾ ನಕ್ಷೆಯನ್ನು ಸಿದ್ಧಪಡಿಸುವುದು ಹಾಗೂ ಬಡಾವಣೆ ನಕ್ಷೆಗಳನ್ನು ಸಿದ್ಧಪಡಿಸುವುದು, ಸಮೂಹ ವಸತಿ ಯೋಜನೆಗಳ ಅಭಿವೃದ್ಧಿ ನಕ್ಷೆಗಳನ್ನು ಅನುಮೋದಿಸುವುದು ಯೋಜನಾ ವಿಭಾಗದ ಹೊಣೆಯಾಗಿದೆ.

ಇ) ಭೂಸ್ವಾಧೀನ ವಿಭಾಗ: ಇಂಜಿನೀಯರಿಂಗ್ ವಿಭಾಗದ ನಿಕಟ ಸಂಪರ್ಕವನ್ನು ಇಟ್ಟುಕೊಂಡು ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಅಗತ್ಯವಾದ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವುದು ಭೂಸ್ವಾಧೀನ ವಿಭಾಗದ ಪ್ರಮುಖ ಕೆಲಸವಾಗಿರುತ್ತದೆ.

ಈ) ಆರ್ಥಿಕ ವಿಭಾಗ: ವಿವಿಧ ಹಣಕಾಸಿನ ವಿಷಯಗಳಲ್ಲಿ ಪ್ರಾಧಿಕಾರಕ್ಕೆ ಸಲಹೆ ನೀಡುವುದು ಹಾಗೂ ಪ್ರಾಧಿಕಾರದ ಲೆಕ್ಕ ಪತ್ರಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸುವುದು ಆರ್ಥಿಕ ವಿಭಾಗದ ಹೊಣೆ ಆಗಿರುತ್ತದೆ.

2) ಪ್ರಾಧಿಕಾರ ಕಾರ್ಯ ಚಟುವಟಿಕೆ:

ನಗರಾಭಿವೃದ್ಧಿ ಪ್ರಾಧಿಕಾರದ ಸ್ಥೂಲ ಕಾರ್ಯ ಚಟುವಟಿಕೆ ಈ ಕೆಳಕಂಡಂತೆ ಇರುತ್ತದೆ.

1. ಹುಬ್ಬಳ್ಳಿ – ಧಾರವಾಡ ನಗರ ಪ್ರದೇಶಕ್ಕೆ ಸ್ಥಳೀಯ ಯೋಜನಾ ಪ್ರಾಧಿಕಾರದ ಪರಿಮಿತಿಯಲ್ಲಿ ಅಭಿವೃದ್ಧಿ ನಕ್ಷೆ ಹಾಗೂ ಯೋಜನಾ ನಕ್ಷೆಯನ್ನು ತಯಾರಿಸುವುದು.
2. ಮಹಾ ಯೋಜನೆಯ ಅನ್ವಯ ಸುಸ್ಥಿತಿಯಾದ ನಗರದ ಅಭಿವೃದ್ಧಿಗಾಗಿ ವಸತಿ ವಿನ್ಯಾಸವನ್ನು ಹಾಗೂ ಇತರ ನಗರಾಭಿವೃದ್ಧಿ ಚಟುವಟಿಕೆಗಳನ್ನು ಅನುಮೋದಿಸುವುದು.
3. ವಸತಿ ವಿನ್ಯಾಸಗಳನ್ನು ನಾಗರೀಕ ಸೌಕರ್ಯ ಉದ್ಯಾನವನ ಹಾಗೂ ಕೆರೆಗಳನ್ನು ಅಭಿವೃದ್ಧಿಪಡಿಸುವ ಕಾರ್ಯವನ್ನು ಹಮ್ಮಿಕೊಳ್ಳುವುದು,
4. ವಸತಿಗಾಗಿ ಹಾಗೂ ಬಡಾವಣೆಗಳಿಗಾಗಿ ಅಭಿವೃದ್ಧಿ ನಕ್ಷೆ ಅನುಮೋದಿಸುವುದು.
5. ಕಟ್ಟಡ ನಕ್ಷೆ ಅನುಮೋದಿಸುವುದು ಹಾಗೂ ಪ್ರಾರಂಭಿಕ ಪ್ರಮಾಣ ಪತ್ರ ನೀಡುವುದು.
6. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಅಡಿಯಲ್ಲಿ ಶಾಸನಬದ್ಧ ಪ್ರಾಧಿಕಾರದ ಕಾರ್ಯಗಳನ್ನು ನಿರ್ವಹಿಸುವುದು.

3) ಸಾಮಾನ್ಯ ಪರಿಚಯ :

ಆಡಳಿತ ವರ್ಗದವರ ಹೆಸರು ಮತ್ತು ಅವಧಿ:

1 ಅಧ್ಯಕ್ಷರು	ಶ್ರೀ ನಾಗೇಶ ಕಲಬುರ್ಗಿ, ದಿ: 01–04–2021 ರಿಂದ 31–03–2022
2 ಆಯುಕ್ತರು	ಶ್ರೀ ನಿಂಗಪ್ಪ ಎಚ್ ಕುಮ್ಮಣ್ಣನವರ, ದಿ: 01–04–2021 ರಿಂದ 31–03–2022
3 ನಗರ ಯೋಜನಾ ಸದಸ್ಯರು	ಶ್ರೀ ವಿವೇಕ ಎನ್ ಕಾರೇಕರ ದಿ: 01–04–2021 ರಿಂದ 31–03–2022
4 ಕಾರ್ಯನಿರ್ವಾಹಕ ಅಭಿಯಂತರು	ಶ್ರೀ ಎಂ.ರಾಜಶೇಖರ ದಿ: 01–04–2021 ರಿಂದ 31–03–2022

5	ಲೆಕ್ಕಪರಿಶೋಧನಾಧಿಕಾರಿ	ಶ್ರೀಮತಿ ಅಕ್ಷತಾ ಇಮ್ಮಗೌದನವರ ದಿನಾಂಕ: 01-04-2021 ರಿಂದ 07-12-2021 ಶ್ರೀ ವಿವೇಕ ಎನ್ ಕಾರೇಕರ ದಿನಾಂಕ: 07-12-2021 ರಿಂದ 04-03-2022 ಶ್ರೀ ಪ್ರಕಾಶ ಕುಲಕರ್ಣಿ ದಿನಾಂಕ: 04-03-2022 ರಿಂದ 31-03-2022

ಲೆಕ್ಕಪರಿಶೋದನಾ ತಂದದ ವಿವರ

1	ಲೆಕ್ಕಪರಿಶೋಧನೆ ಮಾಡಿದವರು	1) ಶ್ರೀ ಎಂ. ಜಿ. ಕುಲಕರ್ಣಿ, ಲೆಕ್ಕಪರಿಶೋಧನಾಧಿಕಾರಿ 2) ಶ್ರೀಮತಿ ರೇಣುಕಾ ಪಾಟೀಲ್, ಲೆಕ್ಕಪರಿಶೋಧಕರು 3) ಶ್ರೀಮತಿ ಲಕ್ಷ್ಮೀ ಕುದರಪ್ಪನವರ, ಲೆಕ್ಕಪರಿಶೋಧಕರು 4) ಶ್ರೀ ಕೃಷ್ಣಾ ಭಾವನೂರ, ಲೆಕ್ಕಪರಿಶೋಧಕರು 5) ಶ್ರೀ ವಿನಾಯಕ ಸವದತ್ತಿ, ಲೆಕ್ಕಪರಿಶೋಧಕರು
2	ಲೆಕ್ಕ ಪರಿಶೋಧನಾ ಅವಧಿ	2021-22
3	ಲೆಕ್ಕ ಪರಿಶೋಧನ ಪ್ರಾರಂಭ	07.07.2022
4	ಲೆಕ್ಕ ಪರಿಶೋಧನ ಮುಕ್ತಾಯ	16.07.2022
5	ಉಪಯೋಗಿಸಿದ ಮಾನವ ದಿನಗಳು	40 ಮಾನವ ದಿನಗಳು
6	ಪುನರ್ ಪರಿಶೀಲನಾ ಅಧಿಕಾರಿಗಳು	ಶ್ರೀ ಮುರಳಿ ಎನ್. ಅಪರ ನಿರ್ದೇಶಕರು ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ಪ್ರಾಂತೀಯ ಕಚೇರಿ, ಬೆಳಗಾವಿ
7	ಪುನರ್ ಪರಿಶೀಲನಾ ದಿನಾಂಕ	19.08.2022

4) ಲೆಕ್ಕಪರಿಶೋಧನೆಯ ವ್ಯಾಪ್ತಿ ಮತ್ತು ಲೆಕ್ಕಪರಿಶೋಧನಾ ಕ್ರಮಗಳು :

ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 2021-22ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಈ ಕೆಳಗೆ ಕಾಣಿಸಿದ ಕಾಯ್ದೆ ಮತ್ತು ನಿಯಮಾವಳಿಗಳನ್ನು ಆಧರಿಸಿ ಕೈಗೊಳ್ಳಲಾಗಿದೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 1987

ಕರ್ನಾಟಕ ಟೋಕೋಪಯೋಗಿ ಇಲಾಖೆ ಕೈಪಿಡಿ

ಕರ್ನಾಟಕ ಸಾರ್ವಜನಿಕ ಖರೀದಿಯಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮಗಳು 2000

ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಸರ್ಕಾರದ ಕಾಯ್ದೆ, ಕಾನೂನು, ಸಂಹಿತೆ ಮತ್ತು ನಿಯಮಾವಳಿಗಳು

ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸಲ್ಪಟ್ಟ ಆದೇಶ, ಸುತ್ತೋಲೆ, ನಿರ್ದೇಶನಗಳು / ಮಾರ್ಗದರ್ಶಿ ಸೂತ್ರಗಳು

5) ಹಿಂದಿನ ಲೆಕ್ಕಪರಿಶೋಧನಾ ವರದಿಗಳ ತೀರುವಳಿ ಕುರಿತು:

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 1987 ರ ಪ್ರಕರಣ 42(5)(6) ರಂತೆ ಹಿಂದಿನ ಸಾಲಿನ ಲೆಕ್ಕ ತನಿಖಾ ವರದಿಗಳಿಗೆ ಸೂಕ್ತ ಹಾಗೂ ಸಮರ್ಥನೀಯವಾದ ಅನುಪಾಲನಾ ಉತ್ತರವನ್ನು ಪೂರಕ ದಾಖಲೆಗಳೊಂದಿಗೆ ಸಲ್ಲಿಸಬೇಕಾಗಿರುತ್ತದೆ. ಪ್ರಾಧಿಕಾರದ ಹಿಂದಿನ ಅವಧಿಯ ಬಾಕಿ ಇರುವ ಕಂಡಿಕೆಗಳ ವಿವರ ಈ ಕೆಳಗಿನಂತಿವೆ.

ಅ. ನಂ	ವರ್ಷ	ಅಕ್ಷೇಪಣಾ ಕಂಡಿಕೆಗಳು		ವಸೂಲಾತಿ ಕಂಡಿಕೆಗಳು	
		ಒಟ್ಟು ಕಂಡಿಕೆಗಳ ಸಂಖ್ಯೆ	ಮೊತ್ತ	ಒಟ್ಟು ಕಂಡಿಕೆಗಳ ಸಂಖ್ಯೆ	ಮೊತ್ತ
1	1987-90	18	5025833	18	2104274
2	1990-91	4	339520	11	1560167
3	1991-92	7	1080035	15	3935215
4	1992-93	4	5600617	6	3561071
5	1993-94	14	4882573	2	169293
6	1994-95	5	1332563	7	16600934
7	1995-96	5	585831	9	3306859
8	1996-97	8	4008584	8	680523
9	1997-98	9	38210149	5	532392
10	1998-99	4	11487448	1	4937
11	1999-00	7	17571915	3	260888
12	2000-01	12	12807978	8	72652
13	2001-02	11	11104042	6	417153
14	2002-03	6	6591989	6	301864
15	2003-04	11	8856268	10	382602
16	2004-05	9	12241136	4	370330
17	2005-06	7	22781409	4	118578
18	2006-07	5	12275022	2	1248438
19	2007-08	3	1563483	5	25996
20	2008-09	2	1031124	5	71368
21	2009-10	2	1188468	4	1017463
22	2010-11	7	2853049	2	10609
23	2011-12	3	927270	2	369019
24	2012-13	1	215388	2	708062
25	2013-14	5	24350276	4	943829
26	2014-15	1	70000000	1	2871992

27	2015-16	3	23881270	0	0
28	2016-17	5	2518880	0	0
29	2017-18	1	4849000	0	0
30	2018-19	5	13890575	2	537120
31	2019-20	4	8817904	3	501494
32	2020-21	6	5915111	1	485380
	ಒಟ್ಟು ರೂ	194	338384680	156	43150502

ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ಪೋಷ್ಕಾರ

ವಿವರ	ಆಕ್ಷೇಪಣಾ ಕಂಡಿಕೆಗಳು		ವಸೂಲಾತಿ ಕಂಡಿಕೆಗಳು	
	ಒಟ್ಟು ಕಂಡಿಕೆಗಳ ಸಂಖ್ಯೆ	ಮೊತ್ತ	ಒಟ್ಟು ಕಂಡಿಕೆಗಳ ಸಂಖ್ಯೆ	ಮೊತ್ತ
ಆರಂಭ ಶಿಲ್ಕು	194	338384680	156	43150502
ವರದಿಯ ಪ್ರಕಾರ ಸೇರ್ಪಡೆ	8	14017467	4	62618063
ಒಟ್ಟು	202	352402147	160	105768565
ವರದಿಯ ಅವಧಿಯಲ್ಲಿ ತೀರುವಳಿ	0	0	0	0
ಅಂತಿಮ ಶಿಲ್ಕು	202	352402147	160	105768565

6 ಆಕ್ಷೇಪಣೆ ಮತ್ತು ವಸೂಲಾತಿ ಮಿನಿಟ್ ವಹಿಯ ನಿರ್ವಹಣೆ :

ವಹಿಯನ್ನು ನಿರ್ವಹಿಸಿ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ವಹಿಯನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 1987 ರ ಪ್ರಕರಣ 42(5) ರಂತೆ ನಿರ್ವಹಿಸಿ ಪ್ರತಿ ಆರ್ಥಿಕ ವರ್ಷದ ಲೆಕ್ಕಪರಿಶೋಧನಾ ವರದಿಯಲ್ಲಿರುವ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ಸಂಕ್ಷಿಪ್ತ ವಿವರಗಳನ್ನು ದಾಖಲಿಸಿಕೊಂಡು ಇದಕ್ಕೆ ಅನುಗುಣವಾಗಿ ಅನುಪಾಲನಾ ಉತ್ತರವನ್ನು ದಾಖಲಿಸಿಕೊಂಡು ಸಕ್ಷಮ ಪ್ರಾಧಿಕಾರದಿಂದ ಕಂಡಿಕೆಗಳು ತೀರುವಳಿಯಾದ ನಂತರ ಆಯಾ ಕಂಡಿಕೆಗಳ ಎದುರು ತೀರುವಳಿ ಮಾಡಿದ ಪ್ರಾಧಿಕಾರ ಮತ್ತು ದಿನಾಂಕ ದಾಖಲಿಸಿಕೊಂಡು ದೃಢೀಕರಿಸಬೇಕಾಗಿರುತ್ತದೆ. ಈ ಕುರಿತು ಸೂಕ್ತ ಕ್ರಮ ಜರುಗಿಸಿ ಮೇಲಿನ ನಿಯಮದಂತೆ ಕ್ರಮ ವಹಿಸಿದ ಬಗ್ಗೆ ಸೂಕ್ತ ವಿವರಣೆ ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂ.37 ದಿನಾಂಕ:15.07.2022 ಕ್ಕೆ ಅನುಸರಣೆ ನೀಡಿಲ್ಲ. ಕಾರಣ ಮಿನಿಟ್ ವಹಿ ನಿರ್ವಹಿಸಲು ತಿಳಿಸಿದೆ.

7) ಸಂಸ್ಥೆಯ ಆರ್ಥಿಕ ಸ್ಥಿತಿ

ಲೆಕ್ಕಪರಿಶೋಧನೆಯ ಪ್ರಾರಂಭದ ದಿ.07/07/2022 ರಂದು ಸಂಸ್ಥೆಯ ನಗದು ಪುಸ್ತಕ ಪರಿಶೀಲಿಸಲಾಗಿ ನಗದು ಶಿಲ್ಕು ಶೂನ್ಯ ಇರುವುದು ಕಂಡು ಬಂದಿತು.

ಪ್ರಾಧಿಕಾರದ 2021-22 ನೇ ಸಾಲಿನ ವ್ಯವಹಾರ ಈ ಕೆಳಕಂಡಂತಿದೆ

ದಿ.01.04.2021 ರಂದು ಪ್ರಾರಂಭದ ಶಿಲ್ಕು	794436651
ವರ್ಷದಲ್ಲಿ ಸ್ವೀಕೃತಿ	423048360
ಒಟ್ಟು	1217485011
ವರ್ಷದಲ್ಲಿ ಖರ್ಚು	308919566
ದಿ.31.03.2022 ರಂದು ಅಂತಿಮಶಿಲ್ಕು	908565445

ವಿವರಗಳನ್ನು ಅನುಬಂಧ 1, 2, 3 ಮತ್ತು 3(ಅ) ರಲ್ಲಿ ಲಗತ್ತಿಸಿದೆ.

ಬ್ಯಾಂಕ ಖಾತೆಗಳ ಮಾಹಿತಿ

Sl.No	Account No	Name of Bank	Account type	Purpose of opening of account	o/B as on 1-04-2021	Receipt	Expenditure	Balance as on cash book 31-03-2022
1	357701000001088	IOB	SB	GENERAL	261288276.62	376257727	615599414.94	21946589.12
2	357701000001188	IOB	SB	Ashray	0	0	0	0
3	357701000001388	IOB	SB	SLAO	0	0	0	0
4	357704000000792	IOB	SB	Pension	559247.35	6558589.00	5374321.58	1743514.77
5	34585469553	SBI	CURRENT	NET BANKING	496537.50	2371623	2154341.00	713819.50
6	110008570151	CANARA	SB	GENERAL	0	490288463.92	458865255.00	31403208.92
7	119110001631	KOTAK MAHINDRA BANK	SB	GENERAL	0	0	0	0
				ಒಟ್ಟು	262344061	875456403	1081993332	55807132

ನಗದು ಪುಸ್ತಕದ ಪ್ರಕಾರ

ಅಂತೀಮ ಶಿಲ್ಕು - ರೂ.55807132/-

ಮುದ್ದತ ಠೇವಣಿ - ರೂ.851900000/-

ಗುರುತಿಸದಿರುವ ವ್ಯತ್ಯಾಸ - ರೂ.858312/-

ಒಂಟೂ ಒಟ್ಟು - ರೂ.908565444/-

ಬ್ಯಾಂಕ್ ಪಾಸ್ ಪುಸ್ತಕದ ಪ್ರಕಾರ ಶಿಲ್ಕು

1	IOB Navanagar	A/C No. 1088 (Gen)	Rs. 4,44,93,205.00
2	IOB	A/C No. 792 (Pension)	Rs. 17,43,515.00
3.	SBI	A/C No. 9533	Rs. 7,14,019.00
4.	Canara Bank Navanagar	A/c No. 0151	Rs. 3,14,03,209.00
5. Fixed deposit			Rs. 85,19,00,000.00
		TOTAL	**Rs. 93,02,53,948.00**

ಬ್ಯಾಂಕ್ ಪಾಸ್ ಪುಸ್ತಕ ಹಾಗೂ ಠೇವಣಿಗಳ ಶಿಲ್ಕು ಈ ಕೆಳಗಿನಂತೆ ಇರುವುದು ಕಂಡು ಬರುತ್ತದೆ

1 ಬ್ಯಾಂಕ ಶಿಲ್ಕು	7,83,53,948
2 ಮುದ್ದತ್ತ ಠೇವಣಿ	85,19,00,000
3 ಪಿಂಚಣಿ ಮುದ್ದತ್ತು ಠೇವಣಿ	0
ಅಂತೂ ಒಟ್ಟು	**93,02,53,948**

ನಗದು ಪುಸ್ತಕದ ಶಿಲ್ಕು ಹಾಗೂ ಬ್ಯಾಂಕ ಶಿಲ್ಕುಗಳ ಸಮನ್ವಯ ಈ ಕೆಳಗಿನಂತೆ ಮಾಡಲಾಗಿದೆ.

1 ಸಾಮಾನ್ಯ ನಗದು ಪುಸ್ತಕದ ಪ್ರಕಾರ ಅಂತಿಮ ಶಿಲ್ಕು	90,85,65,445
2 ನಗದೀಕರಣಗೊಳ್ಳದೇ ಇರುವ ಚೆಕ್ಕುಗಳ ಮೊತ್ತ ಸೇರಿಸಲಾಗಿದೆ	2,25,46,815
ಒಟ್ಟು	93,11,12,260
3 ಮರುಸಮನ್ವಯ ಮಾಡದಿರುವ ವ್ಯತ್ಯಾಸ	8,58,312
ಅಂತೂ ಒಟ್ಟು	**93,02,53,948**

ಹಿಂದಿನ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಸಂಸ್ಥೆಯ ಆರ್ಥಿಕ ಸ್ಥಿತಿಯ ಕಂಡಿಕೆಯಲ್ಲಿ ಮರುಸಮನ್ವಯ ಮಾಡದಿರುವ ವ್ಯತ್ಯಾಸ ಮೊತ್ತ ರೂ.8,58,312/– ಗಳಿರುತ್ತವೆ. ಹಿಂದಿನ ಸಾಲಿನಿಂದ ಅಂದರೆ 1992 ರಿಂದ ಮಾರ್ಚ 2008 ನಗದು ಪುಸ್ತಕಕ್ಕೆ ಹೆಚ್ಚಿನ ಜಮಾ ಎಂದು ತೋರಿಸಿದ್ದು ಮರುಸಮನ್ವಯ ಮಾಡಿರುವುದಿಲ್ಲ, ಕರ್ನಾಟಕ ಆರ್ಥಿಕ ಸಂಹಿತೆ 1958 ಅನುಚ್ಛೇದ 329, 330 ಪ್ರಕಾರ ಬ್ಯಾಂಕಿನ ಖಾತೆಗಳ ಅಂತಿಮ ಶಿಲ್ಕು ಹಾಗೂ ನಗದು ಪುಸ್ತಕದ ಅಂತಿಮ ಶಿಲ್ಕಕ್ಕೆ ಇರುವ ವ್ಯತ್ಯಾಸವನ್ನು ಗುರುತಿಸಬೇಕು ಹಾಗೂ ಮರುಸಮನ್ವಯ ಮಾಡಬೇಕು. ಆದರೆ ಈ ಕ್ರಮವನ್ನು ಇಂದಿನವರೆಗೂ ಕೈಗೊಳ್ಳದೇ ಇರುವುದು ಅಕ್ಷೇಪಾರ್ಹ. ಈ ವ್ಯತ್ಯಾಸವನ್ನು ಗುರುತಿಸಿ ನಗದು ಪುಸ್ತಕದಲ್ಲಿ ಅಗತ್ಯ ಕ್ರಮ ಜರುಗಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ 1 ದಿ:07.07.2022ಕ್ಕೆ ಅನುಸರಣೆ ನೀಡಿರುವುದಿಲ್ಲ.

8) ಅಂಚೆ ಚೀಟಿ ಶಿಲ್ಕು:

ಲೆಕ್ಕಪರಿಶೋಧನೆಯ ಪ್ರಾರಂಭದ ದಿ.07.07.2022 ರಂದು ಅಂಚೆ ಚೀಟಿ ಪರಿಶೀಲಿಸಲಾಗಿ ರೂ.24,474/– ಅಂಚೆ ಚೀಟಿಗಳು ಆರಂಭಿಕ ಶಿಲ್ಕಿನಲ್ಲಿ ಇರುವುದು ಕಂಡು ಬಂದಿತು. ದಿ:31/03/2022ರ ಶಿಲ್ಕು ಪರಿಶೀಲಿಸಲಾಗಿ ವಿವರ ಈ ಕೆಳಗಿನಂತಿದೆ.

ದಿ: 01/04/2021 ರ ಆರಂಭದ ಶಿಲ್ಕು	ರೂ. 17,374
2021–22 ರ ಖರೀದಿ	ರೂ. 1,10,000
ಒಟ್ಟು ಮೊತ್ತ	ರೂ. 1,27,374
2021–22 ರಲ್ಲಿ ಬಳಕೆ	ರೂ. 57,924
31/03/2022 ರ ಅಂತಿಮ ಶಿಲ್ಕು	ರೂ. 69,450

9) ಪ್ರಾಧಿಕಾರದ ಆಯವ್ಯಯ :

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ 1987 ಕಲಂ 43 ರನ್ವಯ ಹುಬ್ಬಳ್ಳಿ ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ ಆಯವ್ಯಯವನ್ನು ಹಿಂದಿನ ವರ್ಷದ ಫೆಬ್ರುವರಿ 1 ನೇ ದಿನಾಂಕಕ್ಕಿಂತ ಮೊದಲು ಪ್ರಾಧಿಕಾರದ ಒಪ್ಪಿಗೆಗಾಗಿ ಮಂಡಿಸಬೇಕಾಗುತ್ತದೆ. ಆದರೆ 2021–22 ನೇ ಸಾಲಿನ ಆಯವ್ಯಯವನ್ನು ದಿನಾಂಕ:03.04.2021 ರಂದು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸರ್ಕಾರಕ್ಕೆ ದಿನಾಂಕ 08.04.2021 ರಂದು ಸಲ್ಲಿಸಲಾಗಿದೆ. ಆಯವ್ಯಯವನ್ನು ಮಂಡಿಸುವಲ್ಲಿ 2 ತಿಂಗಳು ಮೇಲ್ಪಟ್ಟು ವಿಳಂಬವಾಗಿದ್ದು, ವಿಳಂಬಕ್ಕೆ ಯಾವುದೇ ಕಾರಣಗಳನ್ನು ಲಭ್ಯಗೊಳಿಸಿರುವುದಿಲ್ಲ.

2021–22 ನೇ ಸಾಲಿನ ಆಯವ್ಯಯದ ಅಂಕಿ ಅಂಶ ಈ ಕೆಳಗಿನಂತಿವೆ.

ವಿವರ	ಅಂದಾಜು (ಲಕ್ಷ)	ವಾಸ್ತವಿಕ (ಲಕ್ಷ)	ವ್ಯತ್ಯಾಸ (ಲಕ್ಷ)
2021-22 ನೇ ಸಾಲಿನ ಆದಾಯ	3368.90	4230.00	861.10
2021-22 ನೇ ಸಾಲಿನ ವೆಚ್ಚ	3357.46	3089.19	268.27

ಪ್ರಾಧಿಕಾರದಿಂದ ಸಿದ್ಧಪಡಿಸಲಾದ ಆಯವ್ಯಯಕ್ಕೂ ಹಾಗೂ ಪ್ರಾಧಿಕಾರವು ಲೆಕ್ಕಪರಿಶೋಧನೆಗೆ ಒದಗಿಸಿದ ವಾಸ್ತವಿಕ ಆದಾಯ ಮತ್ತು ವೆಚ್ಚಗಳ ತಖ್ತೆಯ ನಡುವೆ ಹೆಚ್ಚಿನ ವ್ಯತ್ಯಾಸ ಕಂಡುಬಂದಿರುತ್ತದೆ. ಆಯವ್ಯಯವನ್ನು ಸಿದ್ಧಪಡಿಸುವಾಗ ವಾಸ್ತವಿಕವಾಗಿ ಬರಬಹುದಾದ ಆದಾಯ ಮತ್ತು ವೆಚ್ಚ ಮಾಡಬಹುದಾದ ಎಲ್ಲಾ ಅಂಶಗಳನ್ನು ಪರಿಗಣಿಸಿ ಸೂಕ್ತ ರೀತಿಯಲ್ಲಿ ಸಿದ್ಧಪಡಿಸಲು ಸೂಚಿಸಲಾಗಿದೆ.

10) ಸಾಮಾನ್ಯ ಆದಾಯ ಹಾಗೂ ಸಾಮಾನ್ಯ ವೆಚ್ಚಗಳು :

ಪ್ರಾಧಿಕಾರದ 2019–20 ರಿಂದ ಮೂರು ವರ್ಷಗಳ ಸಾಮಾನ್ಯ ಆದಾಯ ಹಾಗೂ ಸಾಮಾನ್ಯ ವೆಚ್ಚಗಳ ವಿವರವು ಈ ಕೆಳಗಿನಂತ ಇರುತ್ತದೆ.

ಅ.ಸಂ.	ಅವಧಿ	ಸ್ವೀಕೃತಿ ಸಾಮಾನ್ಯ (ರೂ. ಗಳಲ್ಲಿ)	ಸಾಮಾನ್ಯ ವೆಚ್ಚ (ರೂ. ಗಳಲ್ಲಿ)
1	2019-20	119707030	74045464
2	2020-21	314202922	143634711
3	2021-22	423048360	308919566
	ಒಟ್ಟು	856958312	526599741
4	ಸರಾಸರಿ	285652771	175533247

1. ಹಿಂದಿನ 3 ವರ್ಷಗಳ ಸಾಮಾನ್ಯ ಆದಾಯ ಸಾಮಾನ್ಯ ವೆಚ್ಚಗಳ ವಿವರಗಳನ್ನು ಪರಿಶೀಲಿಸಿದಾಗ ಸಾಮಾನ್ಯ ವೆಚ್ಚಕ್ಕಿಂತ ಆದಾಯ ಹೆಚ್ಚು ಇರುವುದು ಕಂಡು ಬರುತ್ತದೆ.

2. ಪ್ರಾಧಿಕಾರವು ಅಭಿವೃದ್ಧಿಪಡಿಸಿರುವ ಬಾಕಿ ಉಳಿದ ವಿವಿಧ ನಿವೇಶನಗಳನ್ನು ವಿಲೇವಾರಿ ಮಾಡುವದರಿಂದ ಅವಶ್ಯಕತೆಗನುಸಾರವಾಗಿ ಸಂಸ್ಥೆಯ ಹಣಕಾಸಿನ ಸ್ಥಿತಿಯನ್ನು ಉನ್ನತೀಕರಿಸಿಕೊಳ್ಳಬಹುದು.

1) ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ನಿಧಿ ನಿರ್ವಹಣೆ ಕುರಿತು

ನಗರಾಭಿವೃದ್ಧಿ ಇಲಾಖೆಯ ಸುತ್ತೋಲೆ ಸಂ.UDD.4 TTP 2019 ದಿ:01.03.2019 ಪ್ರಕಾರ ನಗರಾಭಿವೃದ್ಧಿ ಪ್ರಾಧಿಕಾರದಿಂದ ಕೆಳಗಿನಂತೆ ವಿವಿಧ ನಿಧಿಗಳನ್ನು ನಿರ್ವಹಿಸಲು ತಿಳಿಸಲಾಗಿದೆ.

1. ನಿಧಿ-General Administration & Master Plan

2. ನಿದಿ–Lake Rejuvenation

3. Fees collected in Lieu of park and open spaces

4. Slum Development

5. Fund: Development

ಆದರೆ ನಗರಾಭಿವೃದ್ಧಿ ಪ್ರಾಧಿಕಾರವು ನಿಧಿಗಳನ್ನು ಈ ಮೇಲಿನಂತೆ ವರ್ಗಾಯಿಸಿ ನಿರ್ವಹಿಸಿಲ್ಲ. ಈ ಕುರಿತು ನೀಡಲಾದ ವಿಚಾರಣಾ ಪತ್ರ ಸಂ.19 ದಿ.15.04.2022ಕ್ಕೆ ಸರ್ಕಾರದ ಸುತ್ತೋಲೆಯಂತೆ ಪ್ರಾಧಿಕಾರದ ನಿಧಿಯನ್ನು ನಿರ್ವಹಿಸಲಾಗಿದೆ" ಎಂದು ಅನುಸರಣೆ ನೀಡಿದ್ದು, ನಿಧಿ 1 ರಿಂದ ನಿಧಿ 6 ರವರಗಿನ ವಿವರಗಳನ್ನು ಲಗತ್ತಿಸಿರುವುದಿಲ್ಲ. ಮುಂದಿನ ದಿನಗಳಲ್ಲಿ ನಿಧಿಗಳನ್ನು ಸರಕಾರದ ಸುತ್ತೋಲೆಯಲ್ಲಿ ವಿವರಿಸಿದಂತೆ ವರ್ಗೀಕರಿಸಿ ನಿರ್ವಹಿಸಲು ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ನಿಧಿ ಆಧಾರಿತ ಲೆಕ್ಕಪದ್ಧತಿಯಲ್ಲಿ ನಿರ್ವಹಿಸಲು ತಿಳಿಸಿದೆ.

12) ವಾರ್ಷಿಕ ಲೆಕ್ಕಪತ್ರಗಳ ವಿಮರ್ಶೆ :

12 (1) ನಗರಾಭಿವೃದ್ಧಿ ಪ್ರಾಧಿಕಾರದ 2021–22 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳು :

ನಗರಾಭಿವೃದ್ಧಿ ಪ್ರಾಧಿಕಾರದ 2021–22ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ದಿನಾಂಕ:06.07.2022 ರಂದು ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ ಕಛೇರಿಗೆ ಕಳುಹಿಸಲಾಗಿದೆ. ಸದರಿ ವಾರ್ಷಿಕ ಲೆಕ್ಕಪತ್ರಗಳನ್ನು ಪರಿಶೀಲಿಸಲಾಗಿದ್ದು ಈ ಕೆಳಕಂಡ ತಖ್ತೆಗಳು ಲಭ್ಯವಿರುತ್ತವೆ.

1. ಸಮತೋಲನ ಪಟ್ಟಿ
2. ಆದಾಯ ಮತ್ತು ವೆಚ್ಚ ತಖ್ತೆ
3. ಸವಕಳಿ ಲೆಕ್ಕಾಚಾರ
4. Financial Reprot of Authority (R&P)

I. Balance Sheet

1. ಸಮತೋಲನ ಪಟ್ಟಿಯಲ್ಲಿ HUDA ನಿಧಿ ಶಿಲ್ಕು ರೂ.399649737/– ಎಂದು ಆರಂಭ ಶಿಲ್ಕು ಇದ್ದು TDS for the Assesment year 2021–22 ರೂ.1790781/– ಕಡಿತಗೊಳಿಸಿದ್ದು ಈ TDS ಮೊತ್ತವು ಠೇವಣಿಗಳ TDS ಕಟಾವಣೆಗಳೇ ಎಂಬ ಬಗ್ಗೆ ವಿವರಣೆ ನೀಡಿರುವುದಿಲ್ಲ. ಅಲ್ಲದೆ ಈ ಮೊತ್ತವನ್ನು ನಿಧಿ ಶುಲ್ಕದಲ್ಲಿ ಏಕೆ ಕಡಿಮೆಗೊಳಿಸಲಾಗಿದೆ ಎಂಬ ಬಗ್ಗೆ ವಿವರಣೆ ನೀಡಿರುವುದಿಲ್ಲ.

2 ಕೆರೆ ಅಭಿವೃದ್ಧಿ ಶುಲ್ಕಗಳಡಿ ಆರಂಭ ಶುಲ್ಕ ರೂ.16,46,88,907/–ಗಳಿದ್ದು ಪ್ರಸ್ತುತ ಸಾಲಿನಲ್ಲಿ ರೂ.5,85,94,600/– ಸಂಗ್ರಹವಾಗಿದ್ದು, ಒಟ್ಟು ಮೊತ್ತ ರೂ.22,32,83,507/– ಗಳನ್ನು ಸರ್ಕಾರದ ನಿಧಿಗೆ ಭರಿಸದೆ Outstanding Liability ಎಂದು ದಾಖಲಿಸಿದ್ದು ಈ ಕುರಿತು ವಿವರಣೆ ನೀಡಿರುವುದಿಲ್ಲ. ಅದರಂತೆ ಕಾಮಗಾರಿಯ EMD SD Outstanding Liability ರೂ.11,98,32,561/–, Performance security Deposit Rs.1,68,333/- Plot EMD, EMD for CA sites, outstanding Liability ರೂ.5,38,94,093/-, Plot EMD outstanding Liability ರೂ.2,82,41,440/– ಇರುತ್ತದೆ, ನಗರಾಭಿವೃದ್ಧಿ ಪ್ರಾಧಿಕಾರ ಈ Liability ಗಳನ್ನು ಕಾಲಕಾಲಕ್ಕೆ ಸರ್ಕಾರದ ಸಂಬಂಧಿಸಿದ ನಿಧಿಗೆ ಭರಣಾ ಮಾಡದೇ ಋಣಭಾರವನ್ನು ಹೆಚ್ಚಿಸುತ್ತಾ ಬಂದಿದ್ದು ಈ ಬಗ್ಗೆ ವಿವರಣೆ ನೀಡಿರುವುದಿಲ್ಲ.

3. ಸಮತೋಲನಾ ಪಟ್ಟಿಯಲ್ಲಿ ಚಾಲ್ತಿ ಹೊಣೆಗಾರಿಕೆಯು 31.03.2022ರ ಅಂತ್ಯಕ್ಕೆ ಒಟ್ಟು ರೂ.9,76,00,480.50 ಇದ್ದು ಸದರಿ ಮೊತ್ತದಲ್ಲಿ ಸರ್ಕಾರಕ್ಕೆ ಭರಣ ಮಾಡದೇ ಪ್ರಾಧಿಕಾರದ ಬ್ಯಾಂಕ್ ಖಾತೆಗಳಲ್ಲಿ ಇರಿಸಿಕೊಂಡ ಮೊತ್ತಗಳ ವಿವರ ಈ ಕೆಳಗಿನಂತಿದ್ದು, ಈ ಕುರಿತು ಸೂಕ್ತ ವಿವರಣೆ ನೀಡಿರುವುದಿಲ್ಲ.

Duties & Taxes	233592	Amount Payable to Govt but retained in HUDA Account
GST Payable	200421	
NPS Payable	334020	
Provision payable to Govt	42098331	
TDS Payable	84798	
Total	42949162	

4. ಸಮತೋಲನಾ ಪಟ್ಟಿಯಲ್ಲಿ ಪ್ರಸ್ತುತ ಸಾಲಿನಲ್ಲಿ Fixed Asset ಅಡಿ ರೂ.506336 Addition ಆಗಿರುತ್ತದೆ. ಆದ್ದರಿಂದ ಈ Addition ಗಳು Furnitures & Fixtures & Computers 180 ದಿನಗಳ ಅವಧಿ ಹೇಗೆ Depreciation ದಲ್ಲಿ ನಿರ್ಧರಿಸಲಾಗಿದೆ ಹಾಗೂ ಸವಕಳಿ ಮೊತ್ತವನ್ನು item ವಾರು ಅಥವಾ ಖರೀದಿ ಮಾಡಿರುವ Addition ಹೊಂದಿರುವ ದಿನಾಂಕಗಳಿಗೆ ನಿರ್ಧರಿಸಲಾಗಿದೆ ಎಂಬ ಬಗ್ಗೆ ವಿವರಣೆ ನೀಡಿರುವುದಿಲ್ಲ. ಅಲ್ಲದೇ ಒಟ್ಟಾರೆ fixed Asset ರೂ.1,55,10,991/– ಗಳಿಗೆ ಆಸ್ತಿ Register ಗಳನ್ನು ಲಭ್ಯಗೊಳಿಸಿರುವುದಿಲ್ಲ. ಸದರಿ ವಹಿಗಳಲ್ಲಿ ಇವುಗಳನ್ನು ವರ್ಷಾಂತ್ಯಕ್ಕೆ KFC ನಿಯಮಗಳಂತೆ stock verification ಕೈಗೊಂಡು ಪ್ರಮಾಣ ಪತ್ರ ನಮೂದಿಸಿದ ಬಗ್ಗೆ ದಾಖಲೆ ಲಭ್ಯಗೊಳಿಸಿರುವುದಿಲ್ಲ.

5. ಸಮತೋಲನಾ ಪಟ್ಟಿಯ Current Asset ನಲ್ಲಿ ಬ್ಯಾಂಕ್ ಬ್ಯಾಲೆನ್ಸನಲ್ಲಿ ಎಂದು ರೂ.5,58,07,132/– ನಮೂದಿಸಿದ್ದು ಆದರೆ ಲೆಕ್ಕಪರಿಶೋಧನೆಗೆ ಒದಗಿಸಿರುವ Financial Report of Authority ಪ್ರಕಾರ Bank Balance ಶುಲ್ಕ ರೂ.7,83,53,948/– ಗಳಿದ್ದು, ರೂ.2,25,46,816/– ಗಳ ವ್ಯತ್ಯಾಸ ಮೊತ್ತವನ್ನು ಸಮತೋಲನಾ ಪಟ್ಟಿಯಲ್ಲಿ ದಾಖಲಿಸಿರುವುದಿಲ್ಲ.

6. ಸಮತೋಲನಾ ಪಟ್ಟಿಯಲ್ಲಿ Accured interest on fixed Deposits ಅಡಿ ರೂ.20,47,693/– ದಾಖಲಿಸಿದ್ದು ಆದರೆ ಪ್ರಸ್ತುತ ಸಾಲಿನಲ್ಲಿ ಹೂಡಿಕೆ ಮಾಡಿರುವ ಹಾಗೂ 31.03.2022 ರ ಅಂತ್ಯಕ್ಕೆ ಇರುವ ಮೊತ್ತಗಳ ಭೌತಿಕ ಸತ್ಯಾಪನೆ ಅನುಪಸ್ಥಿತಿಯಲ್ಲಿ Accrued interest ಹೇಗೆ ಲೆಕ್ಕಾಚಾರ ಮಾಡಲಾಯಿತು ಎಂಬ ಬಗ್ಗೆ ವಿವರಣೆ ನೀಡಿಲ್ಲ.

7. ಆದಾಯ ಮತ್ತು ವೆಚ್ಚ ತಖ್ತೆ ಪರಿಶೀಲಿಸಲಾಗಿ ಆದಾಯ ರೂ.24,89,57,537/– ಮತ್ತು ವೆಚ್ಚ ರೂ.12,79,18,170/– ಗಳಿದ್ದು, R & P ಪ್ರಕಾರ (Financial Receipt of Authority) ಜಮೆ ರೂ. 42,30,48,360/– ಹಾಗೂ ವೆಚ್ಚ ರೂ.30,89,19,566/– ಗಳಿದ್ದು, ಪ್ರಸ್ತುತ ಸಾಲಿನಲ್ಲಿ R & P ಮೊತ್ತ

I and E ಮೊತ್ತಕ್ಕಿಂತ ಹೆಚ್ಚಿಗೆ ಇದ್ದು, ಬೃಹತ ಪ್ರಮಾಣದಲ್ಲಿ ಅಂಕಿಸಂಖ್ಯೆಗಳಲ್ಲಿ ವ್ಯತ್ಯಾಸವಿದ್ದು ಈ ಬಗ್ಗೆ ಸೂಕ್ತ ವಿವರಣೆ ನೀಡಿರುವುದಿಲ್ಲ.

8. ಸವಕಳಿ ಲೆಕ್ಕಾಚಾರ ಪ್ರಸ್ತುತ ಸಾಲಿನಲ್ಲಿ 15 Item ಗಳಿಗೆ ಸವಕಳಿ ಮೊತ್ತ ರೂ.13,62,156/– ಮರು ತೋರಿಸಿದ್ದು ಈ ಕುರಿತು ಯಾವ Method ಅಳವಡಿಸಲಾಗಿದೆ ಎಂಬ ಬಗ್ಗೆ ವಿವರಣೆ ನೀಡಿರುವುದಿಲ್ಲ.

9. Financial Report of Authority ಪ್ರಕಾರ ನಗದು ಪುಸ್ತಕದಲ್ಲಿ 1992 ರಿಂದ ಹೆಚ್ಚುವರಿ ಮೊತ್ತ ರೂ.8,58,312/– ಗಳಿದ್ದು ಈವರೆಗೂ ಹೊಂದಾಣಿಕೆ ಮಾಡದಿರುವುದನ್ನು ಲೆಕ್ಕಪರಿಶೋಧನೆಯಲ್ಲಿ ತೀವ್ರವಾಗಿ ಆಕ್ಷೇಪಿಸಲಾಗಿದೆ. ಅಲ್ಲದೇ Unencashed cheques ಮೊತ್ತ ರೂ.22546815/– ಕುರಿತು ಸೂಕ್ತ ವಿವರಪಟ್ಟಿ ಒದಗಿಸಲು ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂಖ್ಯೆ 3 ದಿ:08.07.2022ಕ್ಕೆ ಅನುಸರಣೆ ನೀಡಿದ್ದು 2021–22ನೇ ಸಾಲಿನಲ್ಲಿ ಮುದ್ದತಿ ಠೇವಣಿಗಳ TDS ಕಟಾವಣೆ ರೂ.17,90,781/– ಬ್ಯಾಂಕಗಳಿಂದ ಭರಿಸಿದ್ದು ನಿಧಿ ಶುಲ್ಕದಲ್ಲಿ ಕಡಿಮೆ ಮಾಡಲಾಗಿದೆ ಎಂದು ವಿವರಿಸಿದ್ದಾರೆ. ಆದರೆ TDS ಕಟಾವಣೆ ಮೊತ್ತ ನಗರಾಭಿವೃದ್ಧಿ ಪ್ರಾಧಿಕಾರದ ನಿಧಿ ಮೊತ್ತದಲ್ಲಿ ಕಟಾಯಿಸುವ ಪ್ರಮೇಯ ಉದ್ಭವಿಸುವುದಿಲ್ಲ.

ಇನ್ನುಳಿದಂತೆ ನಿಯಮಾನುಸಾರ outstanding Liability ಗಳನ್ನು ಕಡಿಮೆಗೊಳಿಸಲು ತಿಳಿಸಿದೆ. ಸಮತೋಲನಾ ಪಟ್ಟಿಯಲ್ಲಿ ಸವಕಳಿ ಮೊತ್ತವನ್ನು Item ವಾರು ಅಥವಾ ಖರೀದಿ ಮಾಡಿರುವ addition ಹೊಂದಿರುವ ದಿನಾಂಕಗಳಿಗೆ ನಿರ್ಧರಿಸಲಾಗಿದೆ. Stock Register ಗಳನ್ನು ದಾಸ್ತಾನು ಶಾಖೆಯಿಂದ ಲಭ್ಯಗೊಳಿಸಲಾಗುವುದು ಎಂದು ತಿಳಿಸಿದ್ದು PWG–81 ನಮೂನೆ ಲೆಕ್ಕಪರಿಶೋಧನೆಗೆ ಲಭ್ಯಗೊಳಿಸಿದ್ದು ಸ್ಥಿರ ಆಸ್ತಿ ವಹಿಯಲ್ಲಿ ಕಟ್ಟಡಗಳ ಕಾಮಗಾರಿ ಸೃಜನೆಗೊಂಡ ಬಗ್ಗೆ ಮಾತ್ರ ನಮೂನೆಗಳು ಇರುತ್ತದೆ. ಕಾರಣ ಸವಕಳಿ ಮೊತ್ತವನ್ನು ಲೆಕ್ಕ ಹಾಕಿರುವ ಬಗ್ಗೆ ಲೆಕ್ಕಪರಿಶೋಧನೆಯಲ್ಲಿ ಒಪ್ಪಲಾಗುವುದಿಲ್ಲ.

Accrued Interest on Fixed Deposits ಮತ್ತು outstanding Liability including fixed Liability and current liability ಮೊತ್ತದ ಕುರಿತು ಯಾವುದೇ ವಿವರಣೆ ನೀಡಿರುವುದಿಲ್ಲ. ಪ್ರಾಧಿಕಾರದಿಂದ ಸರ್ಕಾರಕ್ಕೆ ಭರಿಸಬೇಕಾದ BRTS charges ರೂ.23,08,737 Ring Road construction charges ರೂ.88,78,187/– ಮತ್ತು water supply charges ರೂ.1,23,53,141/– ಗಳನ್ನು ಸರ್ಕಾರಕ್ಕೆ ಭರಣ ಮಾಡದೇ Provisions payable ಎಂದು ಸಮತೋಲನಾ ಪಟ್ಟಿಯಲ್ಲಿ ದಾಖಲಿಸಿದ್ದು ತೀವ್ರ ಆಕ್ಷೇಪಾರ್ಹ.

R & P ವರದಿಯಲ್ಲಿ ದಾಖಲಿಸಿರುವ ಜಮೆ ಹಾಗೂ ವೆಚ್ಚ I & E ಕುರಿತು 2021–22ನೇ ಅವಧಿಯಲ್ಲಿ ಬಹಳ ಕಡಿಮೆ ಆದಾಯ ಹಾಗೂ ವೆಚ್ಚ ಇರುವುದರಿಂದ ಪ್ರಾಧಿಕಾರ ನೀಡಿರುವ ಅನುಸರಣೆಯಲ್ಲಿ ಆದಾಯ ತೆರಿಗೆ Returns ಮಾಡುವ ಸಲುವಾಗಿ ಪ್ರಾಧಿಕಾರದ ಲೆಕ್ಕ ಸನ್ನದುದಾರರು ಮೂಲ ಆದಾಯ ಮತ್ತು ವೆಚ್ಚವನ್ನು ನಮೂದಿಸಿರುತ್ತಾರೆ ಎಂದು ತಿಳಿಸಿದ್ದು ಆದರೆ ಪ್ರಾಧಿಕಾರ ಆದಾಯ ತೆರಿಗೆ ಭರಣಾ ಮಾಡುವ ಮೊತ್ತವನ್ನು ಉಳಿತಾಯ ಮಾಡಲು ಈ ರೀತಿಯಾಗಿ ತಪ್ಪು ವಾರ್ಷಿಕ ಲೆಕ್ಕಪತ್ರಗಳ ತಖ್ತೆಯನ್ನು ತಯಾರಿಸಿರುವುದಾಗಿ ಅನುಸರಣೆಯಲ್ಲಿ ಒಪ್ಪಿಕೊಂಡಿರುವುದರಿಂದ ಪ್ರಾಧಿಕಾರದಿಂದ ಲೆಕ್ಕಪರಿಶೋಧನೆಗೆ ಲಭ್ಯಗೊಳಿಸಿರುವ ತಖ್ತೆಗಳು ಸರಿ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ ಪ್ರಾಧಿಕಾರ ವಾರ್ಷಿಕ ಲೆಕ್ಕಪತ್ರಗಳ ತಖ್ತೆಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಕಾಯ್ದೆ 1987 ನಿಯಮ 43, 44, 45, 46 & 47 ರಂತೆ ತಖ್ತೆಗಳನ್ನು ಕ್ರಮಬದ್ಧವಾಗಿ ಮತ್ತು R & P ಮತ್ತು I & E ಮತ್ತು Balance Sheet ಗಳಲ್ಲಿ ವಾಸ್ತವಿಕ ಅಂಕಿ–ಅಂಶಗಳನ್ನು ಪರಿಗಣಿಸಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಿಸಲಾಗಿದೆ.

12(2) ವಾರ್ಷಿಕ ಲೆಕ್ಕಪತ್ರದ ವರ್ಗೀಕೃತ ಜಮೆ ಹಾಗೂ ವೆಚ್ಚದ ತಖ್ತೆಗಳು :

ಲೆಕ್ಕಪರಿಶೋಧನೆಗೆ ಒದಗಿಸಿದ ವರ್ಗೀಕೃತ ಜಮಾ ಖರ್ಚುಗಳ ತಖ್ತೆಗಳನ್ನು ಪರಿಶೀಲಿಸಲಾಗಿದ್ದು ಗಮನಿಸಿದ ನ್ಯೂನತೆಗಳು ಈ ಕಳಗಿನಂತಿವೆ.

1. ವರ್ಗೀಕೃತ ಜಮೆಯಲ್ಲಿ cost of corner plot ಮೊತ್ತ ರೂ.3,64,47,895/– ಎಂದು ನಮೂದಿಸಿದ್ದು, ಲೆಕ್ಕಪರಿಶೋಧನೆಗೆ ರೂ.1,88,40,500/– ಮೊತ್ತದ ದಾಖಲೆಗಳನ್ನು ಮಾತ್ರ ಒದಗಿಸಲಾಗಿದೆ.

2. Advance Against CA site ವರ್ಗೀಕೃತ ಆದಾಯ ತಖ್ತೆಯಲ್ಲಿ ಮೊತ್ತ ರೂ.16,000/– ಗಳು ಇದ್ದು, ಈ ಮೊತ್ತದ ಕುರಿತ ದಾಖಲೆಗಳನ್ನು ಲೆಕ್ಕಪರಿಶೋಧನೆಗೆ ಒದಗಿಸಿರುವುದಿಲ್ಲ.

3. ವರ್ಗೀಕೃತ ವೆಚ್ಚದಲ್ಲಿ wrong entry made by bank ಎಂದು ರೂ.7,949/– ದಾಖಲಿಸಿದ್ದು ಇದರ ಬಗ್ಗೆ ಸೂಕ್ತ ವಿವರಣೆ ನೀಡಿರುವುದಿಲ್ಲ.

4. ವರ್ಗೀಕೃತ ಖರ್ಚು ತಖ್ತೆಯಲ್ಲಿ Royalty ರೂ.3,09,283/– ಗಳನ್ನು ತೋರಿಸಲಾಗಿದ್ದು ಆದರೆ ಲೆಕ್ಕಪರಿಶೋಧನೆಯಲ್ಲಿ ಒದಗಿಸಲಾದ ದಾಖಲೆಗಳನ್ವಯ ರಾಜಧನ ಮೊತ್ತವನ್ನು ಪ್ರಸಕ್ತ ಸಾಲಿನಲ್ಲಿ ಸರ್ಕಾರಕ್ಕೆ ಭರಣ ಮಾಡಿರುವುದಿಲ್ಲ.

ಈ ಮೇಲಿನ ಅಂಶಗಳ ಕುರಿತು ಸೂಕ್ತ ವಿವರಣೆ ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂ.45 ದಿ:15.07.2022ಕ್ಕೆ ಅನುಸರಣೆ ನೀಡಿದ್ದು, ಮೂಲೆ ನಿವೇಶನಗಳ ಬಾಕಿ ಮೊತ್ತ ರೂ.1,76,07,395/– ಗಳಿಗೆ ಸಂಬಂಧಿಸಿದಂತೆ ಅನುಬಂಧ ಲಗತ್ತಿಸಿದೆ ಎಂದು ಅನುಸರಣೆಯಲ್ಲಿ ತಿಳಿಸಿದ್ದರೂ ಲಗತ್ತು ಇರುವುದಿಲ್ಲ. ರಾಜಧನ ಮೊತ್ತ ರೂ. 3,09,283/–ಗಳನ್ನು ಕೆ2 ಚಲನ್ ಸಂ.7364 ದಿ.27.07.2021 ಪ್ರಕಾರ ಜಮೆ ಮಾಡಲಾಗಿದೆ ಎಂದು ಅನುಸರಣೆಯಲ್ಲಿ ತಿಳಿಸಿದ್ದು, ಚಲನ್ ಹಾಜರುಪಡಿಸಿಲ್ಲ.

12 (3) ಸಮತೋಲನಾ ಪಟ್ಟಿಯಲ್ಲಿ ರಾಜೀವಗಾಂಧಿ ಆಶ್ರಯ ಯೋಜನೆಯ ಮೊತ್ತ ಪಾವತಿ ಬಾಕಿ ಕುರಿತು

2021–22 ನೇ ಸಾಲಿನ ಸಮತೋಲನಾ ಪಟ್ಟಿಯಲ್ಲಿ Outstanding Payable ಅಡಿಯಲ್ಲಿ ಈ ಹಿಂದಿನ ಹಲವಾರು ವರ್ಷಗಳಿಂದ Rajiv Gandhi Ashraya Yojane Corporation ಬಾಕಿ ಮೊತ್ತ ಎಂದು ರೂ.4,20,96,331/– ಗಳನ್ನು ನಮೂದಿಸಲಾಗಿದೆ. ಈ ಕುರಿತು 2019–20ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ ಸಂಖ್ಯೆ 9 ರಲ್ಲಿ ವಿವರಿಸಿದ್ದರೂ ಕೂಡಾ ಲೆಕ್ಕಪರಿಶೋಧನಾ ವರದಿಯ ಅಂಶಗಳನ್ನು ಪ್ರಾಧಿಕಾರವು ಗಂಭೀರವಾಗಿ ಪರಿಗಣಿಸದೇ, ಈ ಮೊತ್ತವನ್ನು ಪ್ರಸಕ್ತ ಸಾಲಿನ ವಾರ್ಷಿಕ ಲೆಕ್ಕಪತ್ರಗಳಲ್ಲಿಯೂ ಕೂಡಾ Outstanding liability ಎಂದು ತೋರಿಸುತ್ತಿರುವುದು ತೀವ್ರ ಆಕ್ಷೇಪಾರ್ಹ. ಪ್ರಾಧಿಕಾರವು ಈ ಬಗ್ಗೆ ತೀವ್ರವೇ ನಿಯಮಾನುಸಾರ ಕ್ರಮ ಕೈಗೊಳ್ಳಲು ತಿಳಿಸಿದೆ.

13) ಪಾವತಿ ಪುಸ್ತಕಗಳು :

ಪ್ರಾಧಿಕಾರದಲ್ಲಿ ಹಣಕಾಸಿನ ಎಲ್ಲಾ ವ್ಯವಹಾರವನ್ನು ನೇರವಾಗಿ ಬ್ಯಾಂಕ ಚಲನ್‌ಗಳ ಮೂಲಕವೇ ನಡೆಸುತ್ತಿದ್ದು ಯಾವುದೇ ರಶೀದಿ ಪುಸ್ತಕಗಳನ್ನು ಹಣ ಸ್ವೀಕೃತಿಗಾಗಿ ಬಳಸಿರುವುದಿಲ್ಲ.

4) ಮುದ್ದತಿ ಠೇವಣಿಗಳು :

4 (1) 2021–22 ನೇ ಸಾಲಿನಲ್ಲಿ ಪ್ರಾಧಿಕಾರ ಹೊಂದಿರುವ ಮುದ್ದತ ಠೇವಣಿಗಳು :

2021–22 ನೇ ಸಾಲಿನಲ್ಲಿ ಪ್ರಾಧಿಕಾರದ ಮುದ್ದತ ಠೇವಣಿಗಳ ವಿತ್ತೀಯ ಸ್ಥಿತಿ ಈ ಕೆಳಗಿನಂತಿದೆ.

ದಿ:01.04.2021 ಕ್ಕೆ ಆರಂಭಿಕ ಶಿಲ್ಕು	554900000
2021-22 ನೇ ಸಾಲಿನಲ್ಲಿ ಹೂಡಿಕೆ	772200000
ಒಟ್ಟು	1327100000
2021-22 ನೇ ಸಾಲಿನಲ್ಲಿ ಹಿಂಪಡೆದಿದ್ದು	475200000
ದಿ:31.03.2022ರ ಅಂತ್ಯಕ್ಕೆ ಶಿಲ್ಕು	851900000

ವಿವರಗಳನ್ನು ಅನುಬಂಧ 4 ರಲ್ಲಿ ಲಗತ್ತಿಸಿದೆ.

14 (2) 2021–22 ನೇ ಸಾಲಿನ ಮುದ್ದತ ಠೇವಣಿಗಳ ಹೂಡಿಕೆ :

2021–22ನೇ ಸಾಲಿನಲ್ಲಿ ಪ್ರಾಧಿಕಾರವು ರೂ.77,22,00,000/– ಗಳನ್ನು Canara & IOB Bank ಗಳಲ್ಲಿ ಹೂಡಿಕೆ ಮಾಡಿದ್ದನ್ನು ಪರಿಶೀಲಿಸಲಾಗಿದ್ದು, ಪರಿಶೀಲನೆಯಲ್ಲಿ ಕಂಡುಬಂದ ನ್ಯೂನತೆಗಳು ಈ ಕೆಳಗಿನಂತಿವೆ.

1. ದಿನಾಂಕ:24.04.2021 ರಂದು ಪ್ರಾಧಿಕಾರದಿಂದ E-Auction ಕರೆಯಲಾಗಿದ್ದು (22 ಕೋಟಿ) ಆದರೆ ಬ್ಯಾಂಕಗಳು ಹೂಡಿಕೆ ಪಡೆಯಲು ಮುಂದೆ ಬರದೇ ಇರುವ ಕಾರಣದಿಂದ KTPP ನಿಯಮದಂತೆ ಮತ್ತೊಮ್ಮೆ E-Auction ಕರೆಯದೆ ಕೊಟೇಶನ್ ಮುಖಾಂತರ ಕರೆದು ಹೂಡಿಕೆ ಮಾಡಿದ್ದು ಗಮನಿಸಲಾಗಿದೆ.
2. ದಿನಾಂಕ:16.06.2022 ರಂದು Canara Bank ಕೊಟೇಶನ ಕರೆದು ಕನರಾ ಬ್ಯಾಂಕನಲ್ಲಿ ಒಟ್ಟು 25 ಮುದ್ಧತಿ ಠೇವಣಿಗಳನ್ನು ಮಾಡಿದ್ದು, ಪ್ರತಿ ಠೇವಣಿಗಳ ಮೊತ್ತ ರೂ.99,00,000/– ಗಳಾಗಿವೆ. ದಿನಾಂಕ:26.08.2021 ರಂದು ಕೊಟೇಶನ್ ಕರೆದು IOB ಬ್ಯಾಂಕನಲ್ಲಿ 24 ಮುದ್ದತ ಠೇವಣಿಗಳನ್ನು ಮಾಡಿದ್ದು, ಪ್ರತಿ ಠೇವಣಿಗಳ ಮೊತ್ತ ರೂ.99,00,000/– ಗಳಾಗಿವೆ. ದಿನಾಂಕ:05.03.2022 ರಲ್ಲಿ Canara Bank ನಲ್ಲಿ 29 ಠೇವಣಿಗಳನ್ನು ಮಾಡಿದ್ದು, ಪ್ರತಿ ಠೇವಣಿಗಳ ಮೊತ್ತ ರೂ.99,00,000/– ಗಳಾಗಿವೆ. 9 ಠೇವಣಿಗಳು IOB Navanagar ಶಾಖೆಯಲ್ಲಿ ಪಿಂಚಣಿ ಉದ್ದೇಶಕ್ಕೆ 2016–17 ರಲ್ಲಿ ಹೂಡಿಕೆ ಮಾಡಲಾಗಿದ್ದು ಹಾಗೇ ಮುಂದುವರೆದಿರುತ್ತವೆ.
3. E-Auction ಕರೆದಾಗ್ಯೂ ಯಾವುದೇ ಬ್ಯಾಂಕ್ ಹೂಡಿಕೆಗೆ ಮುಂದೆ ಬರದ ಕಾರಣ ಕೊಟೇಶನ್ ಮುಖಾಂತರ ಮುದ್ದತ ಠೇವಣಿಗಳನ್ನು ಹೂಡಲಾಗಿದ್ದು ಕೊಟೇಶನ್ ಕರೆದಿರುವ ವಿಧಾನಗಳು ಈ ಕೆಳಗಿನಂತಿವೆ.
   1. Net worth
   2. Capital Adequcy Ratio
   3. Profitability Track Record
   4. NPA
   5. Preference among equals
   6. Total outstanding Investment
   7. Investment of single day
   8. Benefit of Bulk deposit

9. Interest Rate

ಈ ಮೇಲಿನ ವಿಷಯಗಳಿಗೆ ಸಂಬಂಧಿಸಿದಂತೆ Canara Bank & IOB ಬ್ಯಾಂಕಗಳು ದೃಢೀಕೃತ ಪತ್ರಗಳನ್ನು ನೀಡಿದ್ದು, RBI Master Direction Classification valuation and Operation of investments of commercial Bank (Direction) ಗಳಲ್ಲಿ ವಿವರಿಸಿದಂತೆ Indian overseas Bank ಹುಬ್ಬಳ್ಳಿ ಮತ್ತು Canara Bank Hubli Canara Bank Navanagar ಇವರಲ್ಲಿ ದರಪಟ್ಟಿ ಮೇಲೆ ಹೂಡಿಕೆ ಮಾಡಿದ್ದು, ಸದರಿ ಬ್ಯಾಂಕುಗಳು ನೀಡಿರುವ Net worth, capital adequacy Ratio, profitability Track Record, NPA, Total Outstanding Investment on Single day, Benefit of Bulk deposit ಗಳ ಕುರಿತು ಅಂಕಿ ಸಂಖ್ಯೆಗಳನ್ನು ಮಾತ್ರ ದಾಖಲಿಸಿದ್ದು ಇವುಗಳ ಬಗ್ಗೆ ದಾಖಲೆ ಲಗತ್ತಿಸಿರುವುದಿಲ್ಲ. ಕಾರಣ ಬ್ಯಾಂಕುಗಳು ನೀಡಿರುವ ಈ ಅಂಕಿ– ಸಂಖ್ಯೆಗಳು RBI ನಿಯಮಗಳಂತೆ ಸರಿ ಇರುತ್ತವೆ ಎಂಬ ಬಗ್ಗೆ ಕೂಡಾ ದೃಢೀಕರಣ ಇರುವುದಿಲ್ಲ. ಆದ್ದರಿಂದ ಪ್ರಾಧಿಕಾರ ಹೂಡಿಕೆ ಬಡ್ಡಿ ದರವನ್ನು ಮಾತ್ರ ಪರಿಗಣಿಸಿ ಹೂಡಿಕೆ ಮಾಡಿದ್ದು ನಿಯಮಗಳಿಗೆ ವ್ಯತಿರಿಕ್ತವಾಗಿದೆ. ಅಲ್ಲದೇ ದರಪಟ್ಟಿ ಅಹ್ವಾನಿಸಿದ ಬಗ್ಗೆ MCE (55)(49) ಪ್ರಕಾರ ಕನಿಷ್ಟ ಮೂರು ದರಪಟ್ಟಿಗಳು ಕೂಡಾ ಲಭ್ಯವಿರುವುದಿಲ್ಲ. ಈ ಪ್ರಕ್ರಿಯೆಯಲ್ಲಿ KTPP ಕಾಯ್ದೆ 1999 4 e(i) 5 & 18(a) ಪ್ರಕಾರ ಪಾಲನೆ ಆಗಿರುವುದಿಲ್ಲ. ಈ ಕುರಿತು ಸೂಕ್ತ ವಿವರಣೆ ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂ:33 ದಿ:15.07.2022ಕ್ಕೆ "ಮೇಲಿನ ದಾಖಲೆಗಳನ್ನು ಐ.ಓ.ಬಿ. ಮತ್ತು ಕೆನರಾ ಬ್ಯಾಂಕ್ ಗಳಿಂದ ದರಪಟ್ಟಿ ಪಡೆಯುವ ಸಮಯದಲ್ಲಿ ವಿವರ ಪಡೆದು ಠೇವಣಿ ಮಾಡಲಾಗಿದೆ. ಸದರಿ ಬ್ಯಾಂಕುಗಳಿಂದ ಈ ಅಂಕಿಗಳನ್ನು ದೃಢೀಕರಿಸಿದ ಮಾಹಿತಿ ಲಗತ್ತಿಸಿದೆ. ದರಪಟ್ಟಿ ಕರೆಯುವ ಸಮಯದಲ್ಲಿ ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳಿಗೆ ರವಾನಿಸಿದ್ದು, ಈ ಎರಡು ಬ್ಯಾಂಕುಗಳಿಂದ ಮಾತ್ರ ದರಪಟ್ಟಿ ಸ್ವೀಕೃತಿವಾಗಿರುವುದರಿಂದ ಮತ್ತು ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳ ಬಡ್ಡಿದರ ಕಡಿಮೆ ಇರುವ ಕಾರಣ ಸ್ವೀಕೃತವಾದ ದರಪಟ್ಟಿಯನ್ನು ಪರಿಗಣಿಸಿ ಠೇವಣಿ ಇಡಲಾಗಿದೆ" ಎಂದು ಅನುಸರಣೆ ನೀಡಿದ್ದು, ಸರ್ಕಾರದ ನಿಯಮಗಳನ್ವಯ ಹೂಡಿಕೆ ಮಾಡುವುದು ಅತ್ಯಗತ್ಯ ಎಂದು ಅಭಿಪ್ರಾಯಿಸಿದೆ.

15) ಪ್ರಾಧಿಕಾರದ Superannuation cash accumulation scheme ಕುರಿತು

ಹುಬ್ಬಳ್ಳಿ – ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಖಾಯಂ ನೌಕರರ ನಿವೃತ್ತಿ ವೇತನ ಮತ್ತು ಇತರ ಸೌಲಭ್ಯ ನೀಡುವ ಬಗ್ಗೆ ದಿನಾಂಕ:25.10.2014 ರಂದು ಜರುಗಿದ ಪ್ರಾಧಿಕಾರದ ಮಾಸಿಕ ಸಭೆಯ ವಿಷಯ ಸಂಖ್ಯೆ 3ರಲ್ಲಿ ಪ್ರಾಧಿಕಾರದ ಖಾಯಂ ಹಾಗೂ ನಿವೃತ್ತ ನೌಕರರಿಗೆ ಪಿಂಚಣಿ ಹಾಗೂ ಇತರ ಸೌಲಭ್ಯಗಳನ್ನು ನೀಡಲು ಪ್ರಾಧಿಕಾರದ ನಿಧಿಯಿಂದ ನೀಡಲು ಸರ್ಕಾರದ ಆದೇಶ 1) ನಅಇ:43:ಬೆಯೋಪ್ರಾ:2011 ದಿನಾಂಕ:18.03.2011 ರ ಪ್ರಕಾರ ಹಾಗೂ ಸರ್ಕಾರದ ಆದೇಶ 2) ಸಂ: ನಇ1 159 ಬೆಂರೂಪ್ರಾ / 2011 ರ ದಿನಾಂಕ:07.11.2014 ರನ್ವಯ ಆದೇಶಿಸಿದಂತೆ ಸಭೆಯಲ್ಲಿ ತೀರ್ಮಾನಿಸಿ ಪ್ರಾಧಿಕಾರದಿಂದ ರೂ.8 ಕೋಟಿಗಳನ್ನು ಮುದ್ದತ ಠೇವಣಿ ಇಟ್ಟು ಪ್ರತಿ ತಿಂಗಳು ಬರುವ ಬಡ್ಡಿ ಹಣದಿಂದ ಪಿಂಚಣಿ ಮೊತ್ತವನ್ನು ಪಾವತಿಸಲಾಗಿರುತ್ತದೆ. ಆದರೆ ಈಗ ಬ್ಯಾಂಕ್ ಬಡ್ಡಿ ದರವು ಕಡಿಮೆ ಆಗಿದ್ದು ಪ್ರತಿ ತಿಂಗಳ ಪಿಂಚಣಿ ಖಾತೆಗೆ ಜಮಾ ಆಗುವ ಮುದ್ದತ ಠೇವಣಿ ಬಡ್ಡಿ ಮೊತ್ತವು ಹಾಗೂ ಪ್ರಾಧಿಕಾರವು ನೀಡುತ್ತಿರುವ ಪಿಂಚಣಿ ಮೊತ್ತಕ್ಕೆ ಬಹಳ ವ್ಯತ್ಯಾಸವಾಗುತ್ತದೆ, ಕಾರಣ ಈ ಕುರಿತು ಭಾರತೀಯ ಜೀವ ವಿಮಾ ನಿಗಮ ಧಾರವಾಡ ವಿಭಾಗ ಇವರು ದಿನಾಂಕ:29.01.2021 ರ ಪತ್ರದಲ್ಲಿ Proposal or new group superannuation cash Accumulation scheme ಅಡಿಯಲ್ಲಿ ಠೇವಣಿ ಇಟ್ಟು ಪಿಂಚಣಿ ನೀಡಬಹುದಾಗಿದೆ. ನಿಗಮದ ವಾರ್ಷಿಕ ಬಡ್ಡಿದರ ಶೇಕಡಾ 6.75% ರಷ್ಟು ಇರುತ್ತದೆ ಎಂದು LIC ಕಛೇರಿಯಿಂದ ತಿಳಿಸಿದ್ದು, ನಂತರ ಈ ಕುರಿತು ಪುನಃ ಭಾರತೀಯ ಜೀವ ವಿಮಾ ನಿಗಮ ಧಾರವಾಡ ಇವರು ತಮ್ಮ ಕಛೇರಿ ಪತ್ರ ದಿನಾಂಕ:02.08.2021 ರ ತಮ್ಮ ಪತ್ರದಲ್ಲಿ ರೂ.10 ಕೋಟಿ ಮುದ್ದತ ಠೇವಣಿಯನ್ನು ಇಡುವ ಬಗ್ಗೆ ಉಲ್ಲೇಖಿಸಿರುತ್ತಾರೆ. ಕಾರಣ ಈಗ ರಾಜ್ಯ ಸರ್ಕಾರದಿಂದ ಪಿಂಚಣಿ ಮೇಲಿನ ತುಟ್ಟಿಭತ್ಯೆ ಹೆಚ್ಚಳ ಮಾಡಿದ್ದು ಪ್ರತಿ ತಿಂಗಳ ಒಟ್ಟು ಪಿಂಚಣಿ ರೂ.5,87,161/– ಗಳು ಆಗುತ್ತದೆ. ಕಾರಣ ಧಾರವಾಡ ಭಾರತೀಯ ಜೀವ ವಿಮಾ ನಿಗಮದಲ್ಲಿ ಮುದ್ದತ ಠೇವಣಿ ಇಟ್ಟಲ್ಲಿ ಬರುವ ಬಡ್ಡಿದರ ಮೊತ್ತದಲ್ಲಿ ಪಿಂಚಣಿ ಪಾವತಿಸಲು ಅನುಕೂಲವಾಗುತ್ತದೆ.

ಈಗ ಬ್ಯಾಂಕಗಳ ವಾರ್ಷಿಕ ಬಡ್ಡಿದರ 3.65% ಇರುತ್ತದೆ. ಭಾರತೀಯ ಜೀವ ವಿಮಾ ನಿಗಮ ಧಾರವಾಡ ಇವರ ವಾರ್ಷಿಕ ಬಡ್ಡಿದರ 6.75% ಇರುತ್ತದೆ, ಕಾರಣ ಸರ್ಕಾರದ ಆದೇಶದಂತೆ ಪ್ರಾಧಿಕಾರದ ಖಾಯಂ ನೌಕರರಿಗೆ ಪಿಂಚಣಿ ನೀಡುವ ಕುರಿತು ರೂ.10.00 ಕೋಟಿ ಮೊತ್ತವನ್ನು ಭಾರತೀಯ ಜೀವ ವಿಮಾ ನಿಗಮ ಧಾರವಾಡ ವಿಭಾಗದಲ್ಲಿ ಮುದ್ದತ ಠೇವಣಿ ಇಡುವ ಕುರಿತು ದಿನಾಂಕ:13.08.2021 ರ ವಿಷಯ ಸೂಚಿ ಸಂಖ್ಯೆ:12ರ ಪ್ರಕಾರ ತೀರ್ಮಾನಿಸಲಾಗಿದೆ, ಈ ಕುರಿತು ಗಮನಿಸಿದ ಅಂಶಗಳು ಈ ಕೆಳಗಿನಂತಿವೆ.

1 ಪ್ರಾಧಿಕಾರ ರೂ.8 ಕೋಟಿ ಗಳ ಮುದ್ದತ ಠೇವಣಿ ಇಟ್ಟಿದ್ದು LIC Accumulation scheme ನಲ್ಲಿ ರೂ.10 ಕೋಟಿ ಹೂಡಿಕೆ ಮಾಡಿದ್ದು 2 ಕೋಟಿ ವ್ಯತ್ಯಾಸ ಯಾವ ಮೂಲದಿಂದ ಭರಿಸಲಾಗಿದೆ (Source of Income) ಎಂದು ವಿವರಿಸಿಲ್ಲ.

2 ಸದರಿ ಮೊತ್ತ ಹೂಡಿಕೆಗೆ E-Procurement ಮೂಲಕ ಹೂಡಿಕೆ ಮಾಡಿದ ಬಗ್ಗೆ ದಾಖಲೆಗಳನ್ನು ನೀಡಿರುವುದಿಲ್ಲ.

3, ಸದರಿ ಯೋಜನೆ HUDA Retired Employees ಪಿಂಚಣಿ ಕಾರ್ಯಕ್ಕೆ ಉಪಯೋಗಿಸುವ ಉದ್ದೇಶ ಹೊಂದಿದ್ದು ಆದರೆ ರೂ.10 ಕೋಟಿ ಹೂಡಿಕೆಯನ್ನು ಮುಂದಿನ ದಿನಗಳಲ್ಲಿ ಹೆಚ್ಚಿಸಲು ಕೈಗೊಂಡ ಕ್ರಮಗಳನ್ನು ತಿಳಿಸಿಲ್ಲ.

ಈ ಅಂಶಗಳ ಬಗ್ಗೆ ದಾಖಲೆಗಳೊಂದಿಗೆ ವಿವರಣೆ ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂ 9, ದಿ. 12.07.2022ಕ್ಕೆ "ಮೂಲೆ ನಿವೇಶನ ಇ–ಹರಾಜು ಮಾಡಿದ ಮೊತ್ತದಲ್ಲಿ 2 ಕೋಟಿಗಳನ್ನು ತೆಗೆದುಕೊಳ್ಳಲಾಗಿದೆ" ಎಂದು ಅನುಸರಣೆ ನೀಡಿದ್ದು, ಆದರೆ ಈ 2 ಕೋಟಿ ಮೊತ್ತವನ್ನು ಹೇಗೆ ಹಾಗೂ ಎಂದಿನಿಂದ ಸಂಗ್ರಹಿಸಲಾಗಿದೆ ಮತ್ತು ಸಂಗ್ರಹಣೆಗೊಂಡ ಮೊತ್ತವನ್ನು ಯಾವ ಬ್ಯಾಂಕ್ ಖಾತೆಯಿಂದ ವರ್ಗಾಯಿಸಲಾಗಿದೆ ಎಂಬ ಬಗ್ಗೆ ವಿವರಣೆ ನೀಡಿರುವುದಿಲ್ಲ. "ಮುಂಬರುವ ದಿನಗಳಲ್ಲಿ ನಿವೃತ್ತಿ ಹೊಂದುತ್ತಿರುವ ಸಿಬ್ಬಂದಿಗಳಿಗೆ ಹೂಡಿಕೆ ಮಾಡಿ ನಿವೃತ್ತಿ ವೇತನ ಅವಕಾಶ ಕಲ್ಪಿಸಲಾಗುವುದು. ಪ್ರಾಧಿಕಾರದ ಪತ್ರ ಸಂ. ಲೆವಿವಿಪ/ 2022–23/2195, ದಿ.04.08.2022 ಪ್ರಕಾರ ನಗರಾಭಿವೃದ್ಧಿ ಇಲಾಖೆಯಿಂದ ಘಟನೋತ್ತರ ಮಂಜೂರಾತಿಗಾಗಿ ಪತ್ರ ಬರಯಲಾಗಿದೆ" ಎಂದು ತಿಳಿಸಿದ್ದು, ಸರ್ಕಾರದ ನಿಯಮಗಳನ್ವಯ ಹೂಡಿಕೆ ಮಾಡದಿರುವುದು ಆಕ್ಷೇಪಾರ್ಹ ಎಂದು ಅಭಿಪ್ರಾಯಿಸಿದ್ದು, ಸರ್ಕಾರದ ಅನುಮೋದನೆ ಪಡೆದು ಲೆಕ್ಕಪರಿಶೋಧನೆಗೆ ಹಾಜರುಪಡಿಸಲು ತಿಳಿಸಿದೆ.

16) ಸರ್ಕಾರದ ಅನುದಾನಗಳು :

ಪ್ರಸ್ತುತ ಸಾಲಿನಲ್ಲಿ ಪ್ರಾಧಿಕಾರಕ್ಕೆ ಯಾವುದೇ ಅನುದಾನ ಸರಕಾರದಿಂದ ಸ್ವೀಕೃತಗೊಂಡಿಲ್ಲ.

17) ಇ.ಎಂ.ಡಿ. ಕುರಿತು:

ಪ್ರಸ್ತುತ ಸಾಲಿನಲ್ಲಿ Tadasinkoppa ಮತ್ತು Lakamanahalli ಗಳ ನಿವೇಶನ ಹಂಚಿಕೆಯಲ್ಲಿ ಮತ್ತು ಕಾಮಗಾರಿಗಳಲ್ಲಿ ಸ್ವೀಕರಿಸಿದ BD ಮೊತ್ತಗಳ ವಿವರಗಳನ್ನು ವಾರ್ಷಿಕ ಲೆಕ್ಕಪತ್ರದ R & P ವರ್ಗೀಕೃತ ಮಾಹಿತಿಯಲ್ಲಿ ಲಭ್ಯಗೊಳಿಸಲಾಗಿದೆ. ಆದರೆ EMD ವಹಿ ನಿರ್ವಹಿಸಿಲ್ಲ.

18) ಮುಂಗಡಗಳು :

ಮುಂಗಡಗಳ ವಹಿಯನ್ನು ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ.

19) ಸಾಲಗಳ ವಹಿ ನಿರ್ವಹಣೆ :

ಸಾಲಗಳ ವಹಿಯನ್ನು ನಿರ್ವಹಿಸಿ ಹಾಜರುಪಡಿಸಿರುವುದಿಲ್ಲ. ಪ್ರಾಧಿಕಾರದಲ್ಲಿ ಯಾವುದೇ ರಾಷ್ಟ್ರೀಕೃತ ಬ್ಯಾಂಕ್ ಹಾಗೂ ಸಂಸ್ಥೆಗಳಿಂದ ಸಾಲ ಮಾಡಿರುವ ಬಗ್ಗೆ ಸೂಕ್ತ ವಿವರಣೆ ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂ:35 (ದಿ. 15.07.2022ಕ್ಕೆ) ವಿವರಣೆ ನೀಡಿದ್ದು, ಪ್ರಸಕ್ತ ಸಾಲಿನಲ್ಲಿ ಯಾವುದೇ ರೀತಿಯ ಸಾಲವನ್ನು ಪಡೆದಿರುವುದಿಲ್ಲ ಎಂದು ತಿಳಿಸಲಾಗಿದೆ.

20) ಆಸ್ತಿ ಕರದ ಮೇಲೆ ವಸೂಲಿಸಿದ ಉಪಕರಗಳು :

2021–22ನೇ ಸಾಲಿನಲ್ಲಿ ವಸೂಲಾತಿ ಮಾಡಿರುವ ಉಪಕರಗಳ ಮೊತ್ತವನ್ನು ಸರ್ಕಾರಕ್ಕೆ ಭರಣಾ ಮಾಡಬೇಕಾಗಿದ್ದು, ಆರೋಗ್ಯ ಉಪಕರ 15%, ಗ್ರಂಥಾಲಯ ಉಪಕರ 6% ಹಾಗೂ ಭಿಕ್ಷುಕ ಉಪಕರ 3% ಮತ್ತು ಸ್ಲಂ ಸೆಸ್ (ಕೊಳಚೆ ನಿರ್ಮೂಲನಾ ಉಪಕರಗಳನ್ನು ಆಡಳಿತ ವೆಚ್ಚ ಶೇ10% ರಂತೆ ಹಾಗೂ ಶೇ30% ರಂತೆ ಪ್ರಾಧಿಕಾರಕ್ಕೆ ಉಳಿಸಿಕೊಂಡು ಉಳಿದ ಮೊತ್ತವನ್ನು ಸರ್ಕಾರದ ಆಯಾ ನಿಧಿಗೆ ಭರಣಾ ಮಾಡಬೇಕಾಗಿದ್ದು ಲೆಕ್ಕಪರಿಶೋಧನೆಗೆ ದೃಢೀಕರಿಸಿ ನೀಡಿದ ತಖ್ತೆಯ ವಿವರ ಇಂತಿದೆ.

ಕ್ರಮ ಸಂ	ವಿವರಣೆ	2021-22 ಆರಂಭಿಕ ಶಿಲ್ಕು	2021-22 ರಲ್ಲಿ ವಸೂಲಿ	ಆಡಳಿತ ವೆಚ್ಚ	ಸರ್ಕಾರಕ್ಕೆ ಭರಣಾ ಮಾಡಬೇಕಾಗಿದ್ದು	2021-22 ನೇ ಸಾಲಿಗೆ ಸರ್ಕಾರಕ್ಕೆ ಭರಣಾ ಮಾಡಿದ್ದು	ಬಾಕಿ ಬಾಬತ್ತು
1	ಆರೋಗ್ಯ ಉಪಕರ ಶೇ 15%	67482	102162	10216	159428	0	159428
2	ಗ್ರಂಥಾಲಯ ಉಪಕರ ಶೇ 6%	0	40607	4061	36546	36546 24.06.2022	0
3	ಬಿಕ್ಷುಕರ ಉಪಕರ ಶೇ 3%	0	19208	1921	17287	17287	0
4	ಕೊಳಚೆ ನಿರ್ಮೂಲನಾ ಉಪಕರ ಶೇ 30%	0	2971673	891502	2080171	2080171	0
	ಒಟ್ಟು	67482	3133650	907700	2293432	2134004	159428

2018–19 ಸಾಲಿನಿಂದ ಉಪಕರಗಳ ಸಂಗಡ ಹೊಸದಾಗಿ ಸರ್ಕಾರದ ಆದೇಶ ಸಂಖ್ಯೆ ವ್ಯ.ಶಾ.ಇ./20/ಶಾ.ಸ.ನ/ 2012–13 ದಿ:30/08/2013 ರಂತೆ ಸಾರಿಗೆ ಸೆಸ್ 2% ರಂತೆ ಆಸ್ತಿಕರದೊಂದಿಗೆ ವಸೂಲಾತಿಸಲು ಆದೇಶಿಸಿದಂತೆ ವಸೂಲಿ ಮಾಡಲು ಈ ಹಿಂದಿನ ಲೆಕ್ಕ ಪರಿಶೋಧನಾ ವರದಿಯಲ್ಲಿ ತಿಳಿಸಲಾಗಿದ್ದು ಜೂನ್–2021 ನೇ ಸಾಲಿನಿಂದ ಈ ಕ್ರಮ ಜರುಗಿಸಲಾಗಿದೆ. ವಿವರಗಳನ್ನು ಅನುಬಂಧ 5 ರಲ್ಲಿ ಲಗತ್ತಿಸಿದೆ. ಭಾಗಶಃ ತಿಂಗಳುಗಳಲ್ಲಿ ಸಾರಿಗೆ ಸೆಸ್ ವಸೂಲಿಗೆ ಕ್ರಮ ಜರುಗಿಸಿರುವುದನ್ನು ಲೆಕ್ಕ ಪರಿಶೋಧನೆಯಲ್ಲಿ ಗಮನಿಸಲಾಗಿದೆ. ಆರೋಗ್ಯ ಉಪಕರ ಹೊರತು ಪಡಿಸಿ ಉಳಿದ ಎಲ್ಲಾ ಉಪಕರಗಳನ್ನು ಪಾವತಿಸಿದ ದಾಖಲೆಗಳನ್ನು ಸಲ್ಲಿಸಿದ್ದು, ಬಾಕಿ ಇರುವ ಆರೋಗ್ಯ ಉಪಕರವನ್ನು ಸರ್ಕಾರದ ಸಂಬಂಧಿಸಿದ ಖಾತೆಗೆ ಭರಣಾ ಮಾಡುವವರೆಗೆ ಆರೋಗ್ಯ ಉಪಕರ ಮೊತ್ತ ರೂ.91,946/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

21) ಪ್ರಾಧಿಕಾರದ ಆಸ್ತಿಕರದ ಬೇಡಿಕೆ, ವಸೂಲಿ ಮತ್ತು ಬಾಕಿ ವಹಿ (DCB) ನಿರ್ವಹಣೆ :

ಪ್ರಾಧಿಕಾರದ ದಿನಾಂಕ: 01.04.2021 ರಿಂದ 31.03.2022 ರವರೆಗಿನ ಆಸ್ತಿಕರ ಬೇಡಿಕೆ, ವಸೂಲಿ ಮತ್ತು ಬಾಕಿ ವಿವರ ಈ ಕೆಳಗಿನಂತಿವೆ:

ವಸತಿ ವಿನ್ಯಾಸ	01.04.2021 ಕ್ಕೆ ಆರಂಭಿಕ ಶಿಲ್ಕು	2021-22 ಕ್ಕೆ ಬೇಡಿಕೆ	ಒಟ್ಟು	ವಸೂಲಾತಿ 2021-22	ಬಾಕಿ 31.03.2022 ಕ್ಕೆ
ಖೈರಿದೇವರಕೊಪ್ಪ	524898	403123	928021	337286	590735
ಲಕಮನಹಳ್ಳ	422168	390942	813110	260481	552629
ಒಟ್ಟು	947066	794065	1741131	597767	1143364

ಸದರಿ DCB ಯನ್ನು ಪರಿಶೀಲಿಸಿದಾಗ ಮಹಾನಗರ ಪಾಲಿಕೆಗೆ ಹಸ್ತಾಂತರಿಸಿದ ನಿವೇಶನಗಳಲ್ಲಿ ಯಾವುದೇ ಬಾಕಿ ಇರುವುದಿಲ್ಲ. DCB ಪರಿಶೀಲನೆಯಲ್ಲಿ ಕಂಡು ಬಂದ ನ್ಯೂನತೆಗಳು ಈ ಕೆಳಗಿನಂತಿವೆ.

1. ಬೇಡಿಕೆ ವಸೂಲಿ ಬಾಕಿ ಕುರಿತು ಯಾವುದೇ Register ಅನ್ನು ನಿರ್ವಹಿಸಿರುವುದಿಲ್ಲ.
2 ಪ್ರಸ್ತುತ ಸಾಲಿನಲ್ಲಿ ಉದಾಹರಣೆಗಾಗಿ 2 ನಿವೇಶನದ ವಸೂಲಾತಿ ಕುರಿತು ನಗರಾಭಿವೃದ್ಧಿ ಪ್ರಾಧಿಕಾರದ ಚಲನಗಳನ್ನು ಲೆಕ್ಕ ಪರಿಶೋಧನೆಯಲ್ಲಿ ಪರಿಶೀಲಿಸಲಾಗಿ ಆಸ್ತಿ ತೆರಿಗೆ ಬಾಕಿ ಹಾಗೂ ಚಾಲ್ತಿ ಮೊತ್ತವನ್ನು ಪ್ರಾಧಿಕಾರ ಲೆಕ್ಕಹಾಕುವಾಗ ಸದರಿ ಆಸ್ತಿಯ / ನಿವೇಶನದ ಆಸ್ತಿ ಅಳತೆಗಳು ಅಂದರೆ Property Measurement details ಲೆಕ್ಕಪರಿಶೋಧನೆಗೆ ಲಭ್ಯಗೊಳಿಸಿರುವುದಿಲ್ಲ. ಕಾರಣ ಸಂಗ್ರಹಿಸಿರುವ ಆಸ್ತಿ ತೆರಿಗೆ ಮೊತ್ತ ಸರಿ ಇರುತ್ತದೆ ಎಂಬುವುದು ದೃಢೀಕರಿಸಲು ಸಾಧ್ಯವಿಲ್ಲ.
   ಉದಾಹರಣೆಗಾಗಿ: ಮಕ್ಕಬುಲ್ ಅಹ್ಮದ ಎಸ್ ರಶ್ಮಿ ತಡಸಿನಕೊಪ್ಪ ಇವರ ಚಲನ್ ದಿನಾಂಕ:31.11.2021 ರ ಪ್ರಕಾರ ಆಸ್ತಿ ತೆರಿಗೆ ಬಾಕಿ ರೂ.1,215/– ಚಾಲ್ತಿ ರೂ.304/– ಎಂದು ದಾಖಲಿಸಲಾಗಿದೆ.
   ಸದರಿ ಚಲನನಲ್ಲಿ ಆರೋಗ್ಯ ಸೆಸ್ 15% ವಾಚನಾಲಯ ಸೆಸ್ 6% ಭಿಕ್ಷುಕರ ಸೆಸ್ 3% ಒಟ್ಟಾರೆ ಶೇಕಡಾ 24% ಮೊತ್ತ ಅಂದರೆ ಬಾಕಿ ಕಾಲಂ ನಲ್ಲಿ ರೂ.292/– ಮತ್ತು ಚಾಲ್ತಿ ಕಾಲಂನಲ್ಲಿ ರೂ.73/– ಹೀಗೆ ಒಟ್ಟಾರೆ ಮೊತ್ತ ದಾಖಲಿಸಿದ್ದು ವರ್ಗೀಕೃತ ದಾಖಲೆ ಇರುವುದಿಲ್ಲ.
3. ಸದರಿ ಚಲನನಲ್ಲಿ ಆಸ್ತಿಕರದ ಮೇಲೆ ದಂಡದ ಮೊತ್ತ ರೂ.1296/– ಎಂದು ನಮೂದಿಸಿದ್ದು ದಂಡದ ಮೊತ್ತ ಹೇಗೆ ಲೆಕ್ಕ ಹಾಕಲಾಗಿದೆ ಎಂಬ ಬಗ್ಗೆ ವಿವರಣೆ ನೀಡಿರುವುದಿಲ್ಲ.

ಈ ಅಂಶಗಳ ಕುರಿತು ಸೂಕ್ತ ವಿವರಣೆ ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂ.39 ದಿ:15.07.2022ಕ್ಕೆ ಅನುಸರಣೆ ನೀಡಿರುವುದಿಲ್ಲ. ವಿವರಗಳನ್ನು ಅನುಬಂಧ – 5 ಎ ರಲ್ಲಿ ಲಗತ್ತಿಸಿದೆ. ಕಾರಣ ಪ್ರಸಕ್ತ ವರ್ಷದ ಬಾಕಿ ಆಸ್ತಿ ತೆರಿಗೆ ಮೊತ್ತ ರೂ.1,96,298/– ಗಳನ್ನು ವಸೂಲಾತಿಯಲ್ಲಿಡಲಾಗಿದೆ.

22) ಕಾಮಗಾರಿ ಬಿಲ್‌ಗಳಲ್ಲಿ ಶಾಸನಬದ್ಧ ತೆರಿಗೆಗಳ ಕಟಾವಣೆ ಮತ್ತು ಸರ್ಕಾರದ ನಿಧಿಗೆ ಭರಣ :

2021–22 ನೇ ಸಾಲಿನಲ್ಲಿ ಪ್ರಾಧಿಕಾರದಿಂದ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ ಬಿಲ್ಲುಗಳಲ್ಲಿ ವಸೂಲಿಸಿದ ಶಾಸನಬದ್ಧ ತೆರಿಗೆಗಳಾದ ರಾಜಧನ, CGST, SGST, CBF, Income Tax ಗಳನ್ನು ಸರಕಾರದ ನಿಧಿಗೆ ಚಲನ್ ಮತ್ತು E-Payment ಮುಖಾಂತರ ಭರಿಸಿದ ವಿವರ ಹಾಗೂ ಬಾಕಿ ಇರುವ ವಿವರ ಈ ಕೆಳಗಿನಂತಿವೆ.

ಕ್ರಮ ಸಂಖ್ಯೆ	ಶಾಸನಬದ್ಧ ಕಟಾವಣೆ ವಿವರ	ಸಂಗ್ರಹಿಸಿದ ಮೊತ್ತ ರೂ.	ಭರಿಸಿದ ಮೊತ್ತ ರೂ.	ಪ್ರಸ್ತುತ ಸಾಲಿನ ಬಾಕಿ ಮೊತ್ತ ರೂ.	ಷರಾ
1	ರಾಜಧನ	662462	0	662462	ಹಿಂದಿನ ಅವಧಿಯ ಮೊತ್ತ ರೂ.309283 ಭರಿಸಿದ್ದು GSTR-7 ಪ್ರಕಾರ ಪರಿಶೀಲಿಸಿದೆ
2	CBF	22943	0	22943	ಹಿಂದಿನ ಅವಧಿಯ ಮೊತ್ತ ರೂ.18448/- ಭರಿಸಲಾಗಿದೆ
3	SGST	366345	366345	0	GSTR 3B ಪ್ರಕಾರ ಭರಿಸಲಾಗಿದೆ
4	CGST	366345	366345	0	
5	ಅದಾಯ ತೆರಿಗೆ	428504	428504	0	
		1846599	1161194	685405	

ಪ್ರಸಕ್ತ ಸಾಲಿನ ಬಾಕಿ ಶಾಸನಬದ್ಧ ತೆರಿಗೆಗಳನ್ನು ಸರ್ಕಾರಕ್ಕೆ ಭರಣ ಮಾಡುವವರೆಗೆ ಬಾಕಿ ಮೊತ್ತ ರೂ.6,85,405/– ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

23) 2021–22 ನೇ ಸಾಲಿನಲ್ಲಿ ಖಾಸಗಿ ವಿನ್ಯಾಸದಾರರಿಂದ ಲೇಔಟ್ ಹಂಚಿಕೆಯಿಂದ ಸ್ವೀಕೃತಗೊಂಡ ಮೊತ್ತ :

2021–22 ನೇ ಸಾಲಿನಲ್ಲಿ ಖಾಸಗಿ ಬಡಾವಣೆಗಳ ವಿನ್ಯಾಸದಾರರಿಂದ ಧಾರವಾಡ, ಹುಬ್ಬಳ್ಳಿ ಮತ್ತು ನವನಗರಗಳಲ್ಲಿ ವಿವಿಧ ಖಾಸಗಿ ನಿವೇಶನಗಳನ್ನು ಹಂಚಿಕೆ ಮಾಡಿದ್ದು, ನಗರಾಭಿವೃದ್ಧಿ ಪ್ರಾಧಿಕಾರವು Betterment Levy ಮತ್ತು Supervison chanres ಸಂಗ್ರಹಿಸಿದ್ದು ವಿವರಗಳನ್ನು ಅನುಬಂಧ 6 ರಲ್ಲಿ ಲಗತ್ತಿಸಿದೆ.

24) ಭೈರಿದೇವರಕೊಪ್ಪ ವಸತಿ ವಿನ್ಯಾಸ ಹಂಚಿಕೆ ಬಗ್ಗೆ :

2021–22 ನೇ ಸಾಲಿನಲ್ಲಿ ಯಾವುದೇ ನಿವೇಶನ ಹಂಚಿಕೆ ಮಾಡಿರುವುದಿಲ್ಲ.

25) (1) ಪ್ರಾಧಿಕಾರದ ವಿವಿಧ ವಿನ್ಯಾಸಗಳ ಮೂಲೆ ಹಾಗೂ ಬಿಡಿ ನಿವೇಶನಗಳು :

2021–22 ನೇ ಸಾಲಿನಲ್ಲಿ ಪ್ರಾಧಿಕಾರದ ವಿವಿಧ ವಿನ್ಯಾಸಗಳ ಮೂಲೆ ಹಾಗೂ ಬಿಡಿ ನಿವೇಶನಗಳ ಸಂಖ್ಯೆ, ಬೇಡಿಕೆ ವಸೂಲಿ ಹಾಗೂ ಬಾಕಿ ವಿವರ ಈ ಕಳಗಿನಂತಿವೆ.

ವಿವರ	2020-21 ಅಂತಿಮ ಶಿಲ್ಕು	2021-22 ಅಂತಿಮ ಶಿಲ್ಕು
ಸಾಮಾನ್ಯ ನಿವೇಶನಗಳ ಸಂಖ್ಯೆ	898	898
ಮೂಲೆ ನಿವೇಶನಗಳ ಸಂಖ್ಯೆ	1308	1257
ಬಿಡಿ ನಿವೇಶನಗಳ ಸಂಖ್ಯೆ	1071	1071
ಒಟ್ಟು	3277	3226

ಮೇಲಿನಂತೆ 2021–22 ನೇ ಸಾಲಿನಲ್ಲಿ ಒಟ್ಟು 51 ಮೂಲೆ ನಿವೇಶನಗಳನ್ನು ಹರಾಜು ಮಾಡಿದ್ದು, ಹರಾಜು ಪ್ರಕ್ರಿಯೆ ವಿವರ ಕೆಳಗಿನಂತಿದೆ:

ವಿವರ	ರಾಯನಾಳ	ಸತ್ತೂರ/ ಲಕಮನಹಳ್ಳಿ	ಒಟ್ಟು
2021–22ರಲ್ಲಿ ಹರಾಜಿಗೆ ಲಭ್ಯಗೊಳಿಸಿದ ಮೂಲೆ ನಿವೇಶನಗಳ ಸಂಖ್ಯೆ	41	37	78
2021–22ರಲ್ಲಿ ಹರಾಜಿನಲ್ಲಿ ಭಾಗವಹಿಸಿದ ಬಿಡ್ಡುದಾರರ ಸಂಖ್ಯೆ	41	37	78
2021–2ರಲ್ಲಿ ಹರಾಜಿನಲ್ಲಿ ತಿರಸ್ಕರಿಸಿದ ಮೂಲೆ ನಿವೇಶನಗಳ ಸಂಖ್ಯೆ	20	7	27
2021–22ರಲ್ಲಿ ಹಂಚಿಕೆಯಾದ ಮೂಲೆ ನಿವೇಶನಗಳ ಸಂಖ್ಯೆ	21	30	51

2021–22 ನೇ ಸಾಲಿನಲ್ಲಿ ಪ್ರಾಧಿಕಾರದ ವಿವಿಧ ವಿನ್ಯಾಸಗಳ ಮೂಲೆ ಹಾಗೂ ಬಿಡಿ ನಿವೇಶನಗಳ ಸಂಖ್ಯೆ, ಬೇಡಿಕೆ ವಸೂಲಿ ಹಾಗೂ ಬಾಕಿ ವಿವರ ಈ ಕೆಳಗಿನಂತಿವೆ.

ಕ್ರ. ಸಂ.	ವಿವರ	ಮೊತ್ತ
1	ಹಿಂದಿನ ಸಾಲಿನ ಬಾಕಿ	0
2	ಚಾಲ್ತಿ ಸಾಲಿನ ಬೇಡಿಕೆ	7,53,62,000
3	ಒಟ್ಟು ಮೊತ್ತ	7,53,62,000
4	ವಸೂಲಿ	1,88,40,500
5	ಬಾಕಿ	5,65,21,500

ಈ ಮೇಲೆ ವಿವರಿಸಿದಂತೆ ಬಾಕಿ ಹಣವನ್ನು ಪ್ರಾಧಿಕಾರಕ್ಕೆ ಸಂದಾಯ ಮಾಡಲು ಪ್ರಾಧಿಕಾರದಿಂದ ದಿನಾಂಕ:06.04.2022 ರಂದು ಬಿಡ್‌ದಾರರಿಗೆ ತಿಳಿಸಲಾಗಿದ್ದು, ಈ ಕುರಿತು ನೀಡಿದ ವಿಚಾರಣಾ ಪತ್ರ ಸಂ.41 ದಿನಾಂಕ:15.07.2022 ಕ್ಕೆ ಯಾವುದೇ ಅನುಸರಣೆ ನೀಡಿಲ್ಲ. ವಿವರಗಳನ್ನು ಅನುಬಂಧ 7 ಮತ್ತು 7 (ಅ) (ಆ) ರಲ್ಲಿ ವಿವರಿಸಿ ವರದಿಗೆ ಲಗತ್ತಿಸಿದೆ. ಕಾರಣ ರೂ.5,65,21,500/– ಗಳನ್ನು ಸಂಬಂಧಿಸಿದ ಬಿಡ್ ದಾರರಿಂದ ನಿಯಮಾನುಸಾರ ವಸೂಲಿಸುವವರೆಗೆ ವಸೂಲಾತಿಯಲ್ಲಿಡಲಾಗಿದೆ.

25) (2) ಮೂಲೆ ನಿವೇಶನ ಹಂಚಿಕೆಯಲ್ಲಿನ ನ್ಯೂನತೆಗಳು :

1) 2021–22 ನೇ ಸಾಲಿನ ಮೂಲೆ ನಿವೇಶನಗಳ ಇ–ಹರಾಜು ಪ್ರಕ್ರಿಯೆಯನ್ನು ಪತ್ರಿಕಾ ಪ್ರಕಟಣೆಯನ್ನು ನೀಡಿ ಆರಂಭಿಸಿದ್ದು ಈ ನಿವೇಶನ ಹರಾಜಿಗೆ ಆಡಳಿತ ಮಂಡಳಿಯ ಅನುಮೋದನೆ ಪಡೆದಿರುವುದಿಲ್ಲ. ಅಧ್ಯಕ್ಷರಿಂದ ಕಚೇರಿ ಟಿಪ್ಪಣಿ ಅನುಮೋದನೆಯೊಂದಿಗೆ ಸದರಿ ಪ್ರಕ್ರಿಯೆಗೆ ಆಯುಕ್ತರಿಂದ ಚಾಲನೆ ನೀಡಲಾಗಿದೆ. ನಗರಾಭಿವೃದ್ಧಿ ಪ್ರಾಧಿಕಾರವು ಸರ್ಕಾರದ ನಿರ್ದೇಶನದಂತೆ ಆಡಳಿತ ಮಂಡಳಿ ಹೊಂದಿರುವುದರಿಂದ ಈ ಆಡಳಿತ ಮಂಡಳಿ ಪ್ರತಿ ತಿಂಗಳ ಮಾಸಿಕ ಸಭೆ ನಡೆಸಲು ಅವಕಾಶವಿದ್ದರೂ, ಸಭೆ ಕರೆಯದೆ ಮತ್ತು ಸಭೆಯ ಅನುಮೋದನೆಯನ್ನು ಪಡೆಯದೆ ಈ ಪ್ರಕ್ರಿಯೆಯನ್ನು ಕೈಗೊಂಡಿರುವುದು ಆಕ್ಷೇಪಾರ್ಹವಾಗಿದೆ.

2) 2021–22ನೇ ಸಾಲಿನಲ್ಲಿ ದಿನಾಂಕ:06.11.2021 ರಿಂದ 26.11.2021 ರವರೆಗೆ ಇ–ಹರಾಜು ಪ್ರಕ್ರಿಯೆ ಕೈಗೊಂಡಿದ್ದು ಪ್ರತಿಶತ 25%ರಷ್ಟು ಹಣವನ್ನು ಪ್ರಾಧಿಕಾರಕ್ಕೆ ಸಕಾಲದಲ್ಲಿ ಭರಣಾ ಮಾಡಿದ್ದು ಉಳಿದ 75% ರಷ್ಟು ಹಣವನ್ನು ಸಭೆಯ ಅನುಮೋದನೆಯನ್ನು ಪಡೆದುಕೊಂಡು ತದನಂತರ ಭರಣಾ ಮಾಡಲು ಸೂಚಿಸಿರುತ್ತಾರೆ. ಆದರೆ ಪ್ರಾಧಿಕಾರದ ನಿಯಮಗಳಲ್ಲಿ ಪ್ರತಿ ತಿಂಗಳು ಸಭೆ ನಡೆಸಲು ಅವಕಾಶವಿದ್ದರೂ ಇ–ಹರಾಜು ಪ್ರಕ್ರಿಯೆ ಮುಗಿದು 5 ತಿಂಗಳು ಸಭೆಯನ್ನು ಕರೆಯದೆ ಇರುವುದರಿಂದ ನಿವೇಶನದಾರರಿಂದ ಪ್ರಾಧಿಕಾರಕ್ಕೆ ಬರಬೇಕಾದ ಬಾಕಿ 75% ರಷ್ಟು ಹಣವು ಸಾಕಷ್ಟು ವಿಳಂಬವಾಗಿ ಜಮೆಯಾಗಿದ್ದು ಪ್ರಾಧಿಕಾರಕ್ಕೆ ಆರ್ಥಿಕ ನಷ್ಟ ಮತ್ತು ಸಾರ್ವಜನಿಕರಲ್ಲಿ ನಿವೇಶನ ಹಂಚಿಕೆ ಪಾರದರ್ಶಕತೆ ಕುರಿತು ಅನುಮಾನಗಳು ಮೂಡಿರುವುದನ್ನು ನಿವೇಶನದಾರರು ಪದೇ ಪದೇ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದ ದಾಖಲೆಗಳ ಪರಿಶೀಲನೆಯ ಆಧಾರದ ಮೇಲೆ ಕಾಣಬಹುದಾಗಿದೆ.

3) 2021–22 ರ ಸಾಲಿನಲ್ಲಿ ಎಲ್ಲಾ ಮೂಲೆ ನಿವೇಶನಗಳನ್ನು ಹರಾಜಿಗೆ ಇಡಲಾಗಿದ್ದು, ಮೂಲೆ ನಿವೇಶನಗಳು ಪ್ರಾಧಿಕಾರದ ಆದಾಯದ ಮೂಲವಾಗಿರುವುದರಿಂದ ನಿವೇಶನ ಮಾರುಕಟ್ಟೆ ಮೌಲ್ಯ ಪ್ರತಿ ವರ್ಷ ಹೆಚ್ಚಾಗುವುದರಿಂದ ಪ್ರಾಧಿಕಾರಕ್ಕೆ ಅಗತ್ಯವಿರುವಷ್ಟು ನಿವೇಶನಗಳನ್ನು ಮಾತ್ರ ಹರಾಜು ಮಾಡಿ ಮುಂದಿನ ವರ್ಷಕ್ಕೆ ನಿವೇಶನಗಳನ್ನು ಉಳಿಸಿಕೊಳ್ಳುವುದರಿಂದ ಪ್ರಾಧಿಕಾರಕ್ಕೆ ಆರ್ಥಿಕ ಲಾಭವನ್ನು ಒದಗಿಸಬಹುದಾಗಿದೆ ಎಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯಿಸಿದೆ.

26) ಪ್ರಾಧಿಕಾರದಿಂದ ರಚಿಸಲ್ಪಟ್ಟ ವಿನ್ಯಾಸಗಳ ಕ.ಜ.ಪ ತಯಾರಿಸುವ ಕುರಿತು :

ಪ್ರಾಧಿಕಾರದಲ್ಲಿ ಈವರೆಗೂ ರಚಿಸಲ್ಪಟ್ಟ ವಿನ್ಯಾಸಗಳ ಕ.ಜ.ಪ. ತಯಾರಿಸಿರುವುದಿಲ್ಲ. ರಚಿಸಲ್ಪಟ್ಟ ವಿನ್ಯಾಸಗಳ ವಿವರ ಕೆಳಗಿನಂತೆ ಇರುತ್ತದೆ.

ಇಲ್ಲಿಯವರೆಗೂ ರಚಿಸಲ್ಪಟ್ಟ ವಿನ್ಯಾಸಗಳ ಸಂಖ್ಯೆ : 33

ಕ.ಜ.ಪ. ಅನುಮೋದನೆಗೊಂಡ ವಿನ್ಯಾಸಗಳ ಸಂಖ್ಯೆ : 25

ಕ.ಜ.ಪ. ಅನುಮೋದನೆ ಆಗದೆ ಇರುವ ವಿನ್ಯಾಸಗಳ ಸಂಖ್ಯೆ : 08

ಕ.ಜ.ಪ. ಅನುಮೋದನೆಗೊಳ್ಳದೇ ಇರುವ ವಿವರ

ಅ.ನಂ.	ಗ್ರಾಮ	ರಿ.ಸನಂ.	ಎ.ಗು.ಆ.	ಶರಾ
1	ಉಣಕಲ್ಲ	603/1+2	7.34	ಹು.ಧಾ. ನ.ಪ್ರಾ./517/09–10 ದಿ: 26–05–2009 ರಂದು ಹುಬ್ಬಳ್ಳಿ ತಹಶೀಲ್ದಾರ ಕಚೇರಿಗೆ ಕ.ಜ.ಪ. ಅನುಮೋದನಗಾಗಿ ಕಳುಹಿಸಲಾಗಿದೆ.
2	ಅಯೋದ್ಯಾ	157/16	3.01	ಸದರ
3	ಕೃಷ್ಣಾಪೂರ	18/3	1.31	ಅಳತೆ ಕೆಲಸ ಪೂರೈಸಿದ್ದು ದಾಖಲೆಗಳನ್ನು ತಯಾರಿಸಬೇಕಾಗಿದೆ.
4	ಅತ್ತಿಕೊಳ್ಳ	45/1	4.06	ಸದರ
5	ಸುತಗಟ್ಟಿ	116/2	6	ಅಳತೆ ಕೆಲಸ ಪೂರೈಸಿದ್ದು ಯೋಜನಾ ವಿಭಾಗಕ್ಕೆ ನಕ್ಷೆ ಅನುಮೋದನೆಗಾಗಿ ಕಳುಹಿಸಲಾಗಿದೆ.

6	ರಾಯನಾಳ	113/ಎ+ಬಿ	12	ಸದರ
7	ರಾಯನಾಳ	88,1ನೇ ಹಂತ	141.10	ತಹಶೀಲ್ದಾರ ಹುಬ್ಬಳ್ಳಿ ಇವರಿಗೆ ಕ.ಜ.ಪ.
8	ರಾಯನಾಳ	88,2ನೇ ಹಂತ	24.00	ಅನುಮೋದನೆಗಾಗಿ ಪತ್ರ ಸಂಖ್ಯೆ ಹು.ಧಾ.ನ.ಪ್ರಾ. ಸರ್ವೆ/2014–15/1761/ದಿ: 21–08–2014 ರಂದು ಕಳುಹಿಸಿದೆ.
9	ಸತ್ತೂರ ತಡಸಿನಕೊಪ್ಪ		227.21	ಕ.ಜ.ಪ. ಟೆಂಡರ ಕರೆದು ವರ್ಕ ಆರ್ಡರ್ ಕೊಡಲಾಗಿದ್ದು, ಕೆಲಸ ಪ್ರಗತಿಯಲ್ಲಿದೆ.
10	ಲಕಮನಹಳ್ಳಿ	165ಅ +166	181.00	
11	ಅಯೋಧ್ಯಾ	156	20.17	ದಿ: 20/05/2013 ರಂದು ತಹಶೀಲ್ದಾರ ಕಚೇರಿ ಹುಬ್ಬಳ್ಳಿ ಇವರಿಗೆ ಅನುಮೋದನೆಗಾಗಿ ಕಳುಹಿಸಿದೆ.
12	ಅಯೋಧ್ಯಾ	157	17.19	

ಒಟ್ಟು 8 ವಿನ್ಯಾಸಗಳ ಕ.ಜ.ಪ. ಅಂತಿಮ ಹಂತದಲ್ಲಿರುತ್ತದೆ. ಈ ಕುರಿತು ಅನುಮೋದನೆಗಾಗಿ ಸಂಬಂಧಿಸಿದವರಿಗೆ ನೆನಪೋಲೆ ಬರೆದು ಕೂಡಲೇ ಸೂಕ್ತ ಕ್ರಮ ಜರುಗಿಸಲು ಸೂಚಿಸಿದೆ.

27) 2021–22 ನೇ ಸಾಲಿನಲ್ಲಿ ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ :

2021–22 ನೇ ಸಾಲಿನಲ್ಲಿ ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ ಕುರಿತು ಮಾಹಿತಿ ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂ.32 ದಿ:15.07.2022ಕ್ಕೆ ಪ್ರಾಧಿಕಾರದಿಂದ ಎಂಟು ನಿವೇಶನಗಳನ್ನು ಹಂಚಿಕೆ ಮಾಡಿದ ವಿವರ ಲಭ್ಯಗೊಳಿಸಿದ್ದು, ಸದರಿ ನಿವೇಶನಗಳ ಹಂಚಿಕೆಗಳಲ್ಲಿ ಈ ಕೆಳಕಂಡ ಅಂಶಗಳು ಕಂಡುಬಂದಿವೆ.

1. Karnataka Planning Authorities (Allotment of Ciric Amenity sites) Rule 2016 ನಿಯಮ 4ರ ಪ್ರಕಾರ The List of the Civic Amenity Sites available on the website of the authority periodically ಎಂದು ತಿಳಿಸಿದ್ದು, ಆದರೆ HUDA website ನಲ್ಲಿ ನಾಗರಿಕ ಸೌಲಭ್ಯ ನಿವೇಶನಗಳ ಹಂಚಿಕೆ ಮಾಡಬೇಕಾದ ತಖ್ತೆಯನ್ನು ಕಾಲೋಚಿತಗೊಳಿಸಿಲ್ಲ.

2. ಸದರಿ ನಿವೇಶನಗಳನ್ನು Allotment ನಿಯಮಗಳಂತೆ Registration ಶುಲ್ಕ ಭರಿಸಿದ ಬಗ್ಗೆ ದಾಖಲೆಗಳು ನಿಯಮ 8 ರ ಪ್ರಕಾರ ಭರಿಸಿದ ಬಗ್ಗೆ ದಾಖಲೆ ನೀಡಿರುವುದಿಲ್ಲ.

3. Allotment ನಿಯಮ 2016 ನಿಯಮ 9 ನಮೂನೆ 2ರ ಪ್ರಕಾರ ಮೊತ್ತ ಭರಿಸಿದ ಬಗ್ಗೆ ವಿವರಣೆ ನೀಡಿರುವುದಿಲ್ಲ.

4. Allotment ನಿಯಮ 2016 ನಿಯಮ 13 ರ ಪ್ರಕಾರ 8 CA Sites Lease Amount of the site ಪಡೆದ ಬಗ್ಗೆ ಮಾಹಿತಿ ನೀಡಿರುವುದಿಲ್ಲ.

5. Allotment ನಿಯಮ 2016 ನಿಯಮ 16 ರ ಪ್ರಕಾರ CA Sites ಗಳ ರಜಿಸ್ಟರ್ ನಿರ್ವಹಿಸಿದ ಬಗ್ಗೆ ದಾಖಲೆ ನೀಡಿರುವುದಿಲ್ಲ.

6. Allotment ನಿಯಮ 2016 ನಿಯಮ 20 ರ ಪ್ರಕಾರ C.A.Site ಗಳ ಹಂಚಿಕೆ ಕುರಿತು Additional Director or Jiont Director of town & contry Planning Shall audit all transaction pertaining to allotment of Civic Amenity sites within six month of closure of every financial year &

Authority shall sent the Audit reports along with compliance to the government ಎಂದು ತಿಳಿಸಿದ್ದು ಪ್ರಾಧಿಕಾರ ಈ ಕ್ರಮ ಕೈಗೊಂಡಿರುವುದಿಲ್ಲ.
ಮುಂದುವರೆದು ನಾಗರಿಕ ಸೌಲಭ್ಯ ನಿವೇಶನದಡಿ ಪ್ರಸ್ತುತ ಸಾಲಿನಲ್ಲಿ 8 CA Site ಹಂಚಿಕೆಯಾಗಿದ್ದು ವಿವರ ಈ ಕೆಳಗಿನಂತಿದೆ.

ಕ್ರ ಸಂ	ಸರ್ಕಾರಿ ಸಂಸ್ಥೆ	ಭರಿಸಬೇಕಾದ ಮೊತ್ತ	ಭರಿಸಿದ ಮೊತ್ತ
1	ಜಿಲ್ಲಾ ಆಯುಷ ಅಧಿಕಾರಿಗಳು ಧಾರವಾಡ	2020430	0
2	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಹುಬ್ಬಳ್ಳಿ ಧಾರವಾಡ ಶಹರ ಗಾಮನಗಟ್ಟಿ	632960	0
3	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಹುಬ್ಬಳ್ಳಿ ಧಾರವಾಡ ಶಹರ ಮಲ್ಲಾಪೂರ ಗ್ರಾಮ	448755	0
4	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಹುಬ್ಬಳ್ಳಿ ಧಾರವಾಡ ಶಹರ ಬಮ್ಮಾಪೂರ ಗ್ರಾಮ	231299	0
5	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಹುಬ್ಬಳ್ಳಿ ಧಾರವಾಡ ಶಹರ ಅಮರಗೋಳ ಗ್ರಾಮ	1085000	0
6	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಹುಬ್ಬಳ್ಳಿ ಧಾರವಾಡ ಶಹರ ಉಣಕಲ್ಲ ಗ್ರಾಮ	496558	0
7	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಹುಬ್ಬಳ್ಳಿ ಧಾರವಾಡ ಶಹರ ಬೈರಿದೇವರಕೊಪ್ಪ ಗ್ರಾಮ	532125	0
8	ಮಾರ್ಕೆಟಿಂಗ್ ಕಮ್ಯುನಿಕೇಶನ & ಅಡ್ವರ್ಟೈಸ ಲಿ. ಬೆಂಗಳೂರು	931560	931560
		6378687	931560

ವಿವರಗಳನ್ನು ಅನುಬಂಧ 8 ರಲ್ಲಿ ವಿವರಿಸಿ ಲಗತ್ತಿಸಿದೆ. ಸದರಿ ನಿವೇಶನಗಳ ಮೊತ್ತಗಳು ಸ್ವೀಕೃತಿಯಾದ ಕುರಿತು ವಿವರ ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂ.49 ದಿ:16.07.2022ಕ್ಕೆ ಅನುಸರಣೆ ನೀಡಿದ್ದು, "ಕ್ರಮ ಸಂ 8ರ ಸಂಸ್ಥೆಯು ನಿವೇಶನ ಮೊತ್ತ ಭರಿಸಿದ್ದು, ಗುತ್ತಿಗೆ ಒಪ್ಪಂದ ಪತ್ರ ಮಾಡಿಕೊಳ್ಳಲಾಗಿದೆ. ಬಾಕಿ 07 ಸಂಸ್ಥೆಗಳು ಮೊತ್ತ ಭರಣ ಮಾಡಿರುವುದಿಲ್ಲ. ನಿಗದಿತ ಅವಧಿಯಲ್ಲಿ ಮೊತ್ತ ಭರಿಸದೇ ಇದ್ದಲ್ಲಿ ನಗರಾಭಿವೃದ್ಧಿ ಕಾಯ್ದೆ 1987 ಸಿ.ಎ. ನಿವೇಶನಗಳ ನಿಯಮ 1991 ಕಲಂ 10(3) ರನ್ವಯ ಕ್ರಮ ಜರುಗಿಸಲಾಗುವುದು" ಎಂದು ಅನುಸರಣೆ ನೀಡಿದ್ದು, ಪ್ರಾಧಿಕಾರವು ನಿಯಮಾನುಸಾರ ಕ್ರಮ ಕೈಗೊಳ್ಳಲು ತಿಳಿಸಿದೆ. ಸಿ.ಎ. ನಿವೇಶನಗಳ ಮೊತ್ತ ವಸೂಲಿಸಿ ಪ್ರಾಧೀಕಾರದ ನಿಧಿಗೆ ಜಮೆ ಮಾಡುವವರೆಗೆ ರೂ.54,47,127/– ಗಳನ್ನು ವಸೂಲಾತಿಯಲ್ಲಿ ಇಡಲಾಗಿದೆ

28) ಭೈರಿದೇವರಕೊಪ್ಪ ವಸತಿ ವಿನ್ಯಾಸದ ಒಟ್ಟು 49 ಎಕರೆ 29 ಗುಂಟೆ ನಿವೇಶನ ಹಂಚಿಕೆ ಕುರಿತು :

ಭೈರಿದೇವರಕೊಪ್ಪ ವಸತಿ ವಿನ್ಯಾಸದ ಒಟ್ಟು 49 ಎಕರ 29 ಗುಂಟೆ ನಿವೇಶನ ಹಂಚಿಕೆ ಯೋಜನೆಯಲ್ಲಿ ಗಮನಿಸಿದ ಅಂಶಗಳು ಕೆಳಗಿನಂತಿವೆ:

1) ಯೋಜನೆಯ ಅಂದಾಜು ಮೊತ್ತ ರೂ.747/– ಲಕ್ಷಗಳು
2) ಯೋಜನೆಯ ಪ್ರಸ್ತುತ ಹಂತ: ಭೂ ವಿವಾದಿತ ಪ್ರದೇಶವನ್ನು ಹೊರತುಪಡಿಸಿ ಬಾಕಿ ಪ್ರದೇಶದಲ್ಲಿ ಅಭಿವೃದ್ಧಿ ಪೂರ್ಣಗೊಂಡಿದೆ.
   ಈಗಾಗಲೇ ಆಗಿರುವ ವೆಚ್ಚ (ಲಕ್ಷಗಳಲ್ಲಿ): ಅ) ಸಿವಿಲ್ ಕಾಮಗಾರಿಗೆ : ರೂ.597.00 ಲಕ್ಷಗಳು
   ಬ) ಭೂ ಸ್ವಾಧಿನಕ್ಕಾಗಿ : ರೂ.231.50 ಲಕ್ಷಗಳು
   ಒಟ್ಟು ವೆಚ್ಚ : ರೂ.828.50 ಲಕ್ಷಗಳು

ಭೂ ವಿವಾದಿತ ಪ್ರದೇಶವನ್ನು ಹೊರತುಪಡಿಸಿ ಬಾಕಿ ಪ್ರದೇಶದಲ್ಲಿ ಅಭಿವೃದ್ಧಿ ಪೂರ್ಣಗೊಂಡಿದೆ. ಸರ್ಕಾರದ ಆದೇಶದಂತೆ ವಿಮಾನ ನಿಲ್ದಾಣ ಸಂತ್ರಸ್ತರಿಗೆ 153 ನಿವೇಶನಗಳನ್ನು ಭೂಮಾಲಿಕರಿಗೆ 28 ನಿವೇಶನಗಳನ್ನು ಹಾಗೂ ಸಾರ್ವಜನಿಕರಿಗೆ – 101 ನಿವೇಶನಗಳನ್ನು (ಒಟ್ಟು 282) ಹಂಚಿಕೆ ಮಾಡಲಾಗಿದೆ ಬಾಕಿ ನಿವೇಶನಗಳನ್ನು ಮಾನ್ಯ ನ್ಯಾಯಾಲಯದ ಪ್ರಕರಣ ಮುಕ್ತಾಯಗೊಂಡ ನಂತರ ನಿವೇಶನ ಹಂಚಿಕೆ ಮಾಡಲಾಗುವುದು ಎಂದು ತಿಳಿಸಿದ್ದು ಸದ್ಯ ಯಾವ ಹಂತದಲ್ಲಿ ಇದೆ ಎಂಬ ಬಗ್ಗೆ ವಿವರಣೆ ಕೋರಿ ನೀಡಲಾದ ಲೆಕ್ಕಪರಿಶೋಧನಾ ವಿಚಾರಣಾ ಪತ್ರ ಸಂ:05 ದಿ: 11.07.2022ಕ್ಕೆ "ಪ್ರಕರಣವು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಇರುವುದಾಗಿ ಪ್ರಾಧಿಕಾರ ಅನುಸರಣೆ ನೀಡಿದೆ.

29) ಅಮರಗೋಳ ವಸತಿ ವಿನ್ಯಾಸ ಒಟ್ಟು 43 ಎಕರೆ 04 ಗುಂಟೆ ನಿವೇಶನ ಹಂಚಿಕೆ ಕುರಿತು:

ಅಮರಗೋಳ ವಸತಿ ವಿನ್ಯಾಸ ಒಟ್ಟು 43 ಎಕರೆ 04 ಗುಂಟೆಗಳಲ್ಲಿನ ನಿವೇಶನಗಳ ಹಂಚಿಕೆ ಯೋಜನೆಯಲ್ಲಿ ಗಮನಿಸಿದ ಅಂಶಗಳು ಈ ಕೆಳಗಿನಂತಿವೆ.

1. ಯೋಜನೆಯ ಅಂದಾಜು ಮೊತ್ತ ರೂ.1022/– ಲಕ್ಷಗಳು
2 ಯೋಜನೆಯ ಪ್ರಸ್ತುತ ಹಂತ: 1–33ಎ–04 ಗುಂಟೆ ಕ್ಷೇತ್ರದಲ್ಲಿ ರಸ್ತೆ ಖಡೀಕರಣ ನೀರು ಸರಬರಾಜು ಒಳಚರಂಡಿ ಜಾಲ ಗಟಾರ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಭೂ ಸ್ವಾಧೀನ ಕುರಿತು ಸುಪ್ರೀಂ ಕೋರ್ಟನಲ್ಲಿ ದಾವೆ ಇರುವುದರಿಂದ ಇನ್ನೂಳಿದ 10 ಎಕರೆ ಪ್ರದೇಶದಲ್ಲಿ ಕಾಮಗಾರಿಗಳು ಬಾಕಿ ಇರುತ್ತವೆ. ಈಗಾಗಲೇ ಆಗಿರುವ ವೆಚ್ಚ : ಅ) ಸಿವಿಲ್ ಕಾಮಗಾರಿಗೆ : ರೂ.280.00 ಲಕ್ಷಗಳು
   ಬ) ಭೂ ಸ್ವಾಧಿನಕ್ಕಾಗಿ : ರೂ.427.95 ಲಕ್ಷಗಳು
   ಒಟ್ಟು ವೆಚ್ಚ : ರೂ.707.95 ಲಕ್ಷಗಳು

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಸಂ.5014/2008(ಎಲ್.ಎ.ಆರ್.ಇ.ಎಸ್) ದಿ:01.07.2009 ಪ್ರಕಾರ ಅಭಿವೃದ್ಧಿ ಕಾಮಗಾರಿಗಳನ್ನು ನಿಲ್ಲಿಸಲಾಗಿದೆ. ಸದರಿ ನ್ಯಾಯಾಲಯದ ಪ್ರಕಾರ ಕುರಿತು ಸರ್ವೋಚ್ಚ ನ್ಯಾಯಾಲಯದಲ್ಲಿದ್ದು ಅಂತಿಮ ಹಂತದಲ್ಲಿವೆ. ನಿವೇಶನಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದು ಅವುಗಳನ್ನು ಪರಿಶೀಲಿಸಿ ಅರ್ಹ, ಅನರ್ಹ ಅರ್ಜಿದಾರರ ಯಾದಿಯನ್ನು ತಯಾರಿಸಿ ವೆಬ್ ಸೈಟನಲ್ಲಿ ಪ್ರಕಟಿಸಲಾಗಿದ್ದು ಹಂಚಿಕೆ ಕಾರ್ಯ ಬಾಕಿ ಇರುತ್ತವೆ" ಎಂದು ಪ್ರಾಧಿಕಾರದಿಂದ ತಿಳಿಸಿದ್ದು, ಸದ್ಯ ಇರುವ Status quo ಲಭ್ಯಗೊಳಿಸಲು ಕೋರಿ ನೀಡಲಾದ ವಿಚಾರಣಾ ಪತ್ರ ಸಂ.07 ದಿ:11.07.2022ಕ್ಕೆ, "ಸದರಿ ಪ್ರಕರಣವು ಇನ್ನೂ ಚಾಲ್ತಿಯಲ್ಲಿರುತ್ತದೆ" ಎಂದು ಅನುಸರಣೆ ನೀಡಲಾಗಿದೆ.

